# ವಾಹನ ಚಾಲನೆ ಮಾಡುವ ಮುಂಚೆ ನಿಮ್ಮ ಬಳಿ ಇರಬೇಕಾದ ದಾಖಲಾತಿಗಳು

| | |
|---|---|
| 1 | **ಚಾಲನೆ / ಸವಾರಿ ಮಾಡುವಾಗ ಯಾವ ದಾಖಲಾತಿಗಳನ್ನು ಹೊಂದಿರಬೇಕು?** |
| | • ಚಾಲನಾ ಪರವಾನಿಗೆ<br>• ನೋಂದಣಿ ಪ್ರಮಾಣ ಪತ್ರ<br>• ಎಮಿಷನ್ ಟೆಸ್ಟ್ ಸರ್ಟಿಫಿಕೇಟ್ / ಪಲ್ಯೂಷನ್ ಅಂಡರ್ ಕಂಟ್ರೋಲ್ ಸರ್ಟಿಫಿಕೇಟ್<br>• ವಿಮಾ ಪ್ರಮಾಣ ಪತ್ರ<br>• ಫಿಟ್‌ನೆಸ್ ಪ್ರಮಾಣಪತ್ರ, ಪರವಾನಗಿ ಮತ್ತು ತೆರಿಗೆ ಪಾವತಿಸಿದ ಪ್ರಮಾಣ ಪತ್ರ (ಸಾರಿಗೆ ವಾಹನಗಳ ಸಂದರ್ಭದಲ್ಲಿ) |
| | ಅಸಲು ದಾಖಲೆಗಳನ್ನು ಕೊಂಡೊಯ್ಯಬೇಕು ಅಥವಾ ಡಿಜಿಲಾಕರ್ ಅಥವಾ ಎಂಪರಿವಾಹನ್ ಅಪ್ಲಿಕೇಷನ್‌ನಲ್ಲಿ ತೋರಿಸಬೇಕು. |
| 2 | ಪರವಾನಗಿ ಇಲ್ಲದೆ ವಾಹನ ಚಾಲನೆ ಮಾಡಿದರೆ ಆಗುವ ಪರಿಣಾಮಗಳೇನು? |
| | ಪರವಾನಗಿ ಇಲ್ಲದೆ ವಾಹನ ಚಾಲನೆ ಮಾಡಿದರೆ ದ್ವಿಚಕ್ರ / ತ್ರಿಚಕ್ರ ವಾಹನಗಳಿಗೆ ೧೦೦೦/- ರೂ , ಲಘು ಮೋಟಾರು ವಾಹನಗಳಿಗೆ ೨೦೦೦/-ರೂ ಮತ್ತು ಇತರೆ ವಾಹನಗಳಿಗೆ ೫೦೦೦/- ರೂ ದಂಡ ವಿಧಿಸಲಾಗುತ್ತದೆ. ಪರವಾನಗಿ ಇಲ್ಲದ ವ್ಯಕ್ತಿಗೆ ವಾಹನವನ್ನು ಚಲಾಯಿಸಲು/ಸವಾರಿ ಮಾಡಲು ಅನುಮತಿಸಿದರೆ ವಾಹನದ ನೋಂದಣಿ ಮಾಲೀಕರು ಅಥವಾ ವಾಹನದ ಉಸ್ತುವಾರಿ ವ್ಯಕ್ತಿಗೂ ಅದೇ ಮೊತ್ತಕ್ಕೆ ದಂಡ ವಿಧಿಸಲಾಗುತ್ತದೆ. |
| | **ದಂಡ ಸಂಗ್ರಹಿಸುವ ಅಧಿಕಾರವಿರುವ ಅಧಿಕಾರಿ** |
| 3 | ಯಾವ ದರ್ಜೆಯ ಅಧಿಕಾರಿಗೆ ಸಂಚಾರ ನಿಯಮ ಉಲ್ಲಂಘನೆಗೆ ಸ್ಥಳದಂಡ ಸಂಗ್ರಹಿಸುವ ಅಧಿಕಾರವಿದೆ? |
| | ಸಹಾಯಕ ಸಬ್ ಇನ್ಸ್ಪೆಕ್ಟರ್ ಹುದ್ದೆ ಹಾಗೂ ಈ ಹುದ್ದೆಗೂ ಹೆಚ್ಚಿನ ಯಾವುದೇ ಸಂಚಾರ ಅಧಿಕಾರಿಗಳಿಗೆ ಸಂಚಾರ ನಿಯಮ ಉಲ್ಲಂಘನೆಗಾಗಿ ಸ್ಥಳ ದಂಡವನ್ನು ಸಂಗ್ರಹಿಸಲು ಅಧಿಕಾರವಿದೆ. |
| | **ಸಂಚಾರ ನಿಯಮ ಉಲ್ಲಂಘನೆ ನೋಟೀಸ್** |
| 4 | ಟ್ರಾಫಿಕ್ ಎನ್‌ಫೋರ್ಸ್ಮೆಂಟ್ ಆಟೋಮೇಷನ್ ಕೇಂದ್ರದಿಂದ ನನಗೆ ಒಂದು ನೋಟೀಸ್ ಬಂದಿದೆ. ಈಗ ನಾನು ಏನು ಮಾಡಬೇಕು? |
| | ನೋಟೀಸ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ನಮೂದಾಗಿರುವ ದಂಡವನ್ನು ಈ ಕೆಳಕಂಡ ಯಾವುದಾದರೂ ಸ್ಥಳಗಳಲ್ಲಿ ಪಾವತಿಸಿ ರಸೀತಿ ಪಡೆದು ಪ್ರಕರಣವನ್ನು ಇತ್ಯರ್ಥಗೊಳಿಸಿಕೊಳ್ಳಬಹುದು.<br>ಟ್ರಾಫಿಕ್ ಹೆಡ್‌ಕ್ವಾರ್ಟರ್ಸ್, ೫ನೇ ಮಹಡಿ, ಎನ್‌ಫೋರ್ಸ್ಮೆಂಟ್ ಆಟೋಮೇಷನ್ ಸೆಂಟರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು |
| | • ಬೆಂಗಳೂರು ನಗರದ ಳಳ ಸಂಚಾರ ಪೊಲೀಸ್ ಠಾಣೆಗಳಲ್ಲಿ ಯಾವುದಾದರೊಂದು ಠಾಣೆ<br>• ಬೆಂಗಳೂರು ನಗರದಲ್ಲಿ ದಂಡ ಸಂಗ್ರಹಿಸಲು ಅಧಿಕಾರ ಹೊಂದಿರುವ ಯಾವುದೇ ಸಂಚಾರ ಪೊಲೀಸ್ ಅಧಿಕಾರಿ<br>• ಯಾವುದೇ ಬೆಂಗಳೂರು-ಒನ್ ಕೇಂದ್ರಗಳು |

| | |
|---|---|
| | • ಆನ್‌ಲೈನ್:https://btp.gov.in or https://karnatakaone.gov.in |
| 5 | **ಈಗಾಗಲೇ ನನ್ನ ವಾಹನವನ್ನು ಬೇರೊಬ್ಬರಿಗೆ ಮಾರಾಟ ಮಾಡಿದ್ದರೂ ಸಹ ನನ್ನ ಹೆಸರಿಗೆ ಏಕೆ ಇನ್ನೂ ಸಂಚಾರ ನಿಯಮ ಉಲ್ಲಂಘನೆಯ ನೋಟೀಸ್ ಬರುತ್ತಿವೆ? ಇದಕ್ಕೆ ಕಾರಣವೇನು?** |
| | ಸಾರಿಗೆ ಇಲಾಖೆಯ ಲಭ್ಯ ದಾಖಲೆಗಳಿಂದ ಆನ್‌ಲೈನ್‌ನಲ್ಲಿ ವಾಹನ ಮಾಲೀಕರ ವಿಳಾಸವನ್ನು ಪಡೆದುಕೊಂಡು ನೋಟೀಸ್‌ಗಳನ್ನು ಮುದ್ರಿಸಲಾಗುತ್ತದೆ. ನೀವು ನೋಟೀಸ್ ಸ್ವೀಕರಿಸಿದ್ದೀರಿ ಎಂದರೆ ನೀವು ಅದನ್ನು ಮಾರಾಟ ಮಾಡಿದ್ದರೂ ಸಹ ವಾಹನವು ಸಾರಿಗೆ ಇಲಾಖೆಯ ದಾಖಲೆಗಳಲ್ಲಿ ನಿಮ್ಮ ಹೆಸರಿನಲ್ಲಿಯೇ ಮುಂದುವರಿಯುತ್ತಿದೆ. ಮಾಲೀಕತ್ವದ ಬದಲಾವಣೆಯನ್ನು ಮಾಡಿಕೊಳ್ಳದೆ ವಾಹನವನ್ನು ಮಾರಾಟ ಮಾಡುವುದು ಬಹಳ ಅಪಾಯಕಾರಿ. ಕೇವಲ ಡೆಲಿವರಿ ನೋಟ್‌ಗೆ ಸಹಿ ಮಾಡುವುದು ಮಾಲೀಕತ್ವದ ಬದಲಾವಣೆ ಆಗಿದೆ ಎಂಬುದಕ್ಕೆ ಖಾತರಿಯಲ್ಲ. ವಾಹನವನ್ನು ಖರೀದಿಸಿದವರು ತನ್ನ ಹೆಸರಿನಲ್ಲಿ ವಾಹನವನ್ನು ನೋಂದಾಯಿಸಿಕೊAಡಿರುವುದನ್ನು ನೀವೇ ಖಚಿತಪಡಿಸಿಕೊಳ್ಳಬೇಕು. ಅವರು ಹಾಗೆ ಮಾಡುವುದಕ್ಕೆ ವಿಫಲವಾದರೆ ಅದನ್ನು ಆರ್.ಟಿ.ಓನಲ್ಲಿ ನೀವೇ ಮಾಡಿಸಬೇಕು. ಹಾಗೆ ಮಾಡದಿದ್ದಲ್ಲಿ ನೀವೇ ಉಲ್ಲಂಘನೆಯ ನೋಟೀಸ್‌ಗಳನ್ನು ಸ್ವೀಕರಿಸುತ್ತಲೇ ಇರುತ್ತೀರಿ. ವಾಹನವು ಮಾರಣಾಂತಿಕ ಅಪಘಾತಕ ಅಥವಾ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿದ್ದರೆ ಪರಿಸ್ಥಿತಿ ಇನ್ನೂ ಕೆಟ್ಟದಾಗಿ ನಿಮ್ಮನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆಯಲ್ಲದೆ ಈ ಸಂಬ Aಧದ ಇತರ ಕಾನೂನು ರಿತ್ಯಾ ನಿಮ್ಮ ಹೊಣೆಗಾರಿಕೆ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. |
| | **ಸೀಟ್ ಬೆಲ್ಟ್ (ಆಸನ ಪಟ್ಟಿ)** |
| 6 | ಸೀಟ್ ಬೆಲ್ಟ್‌ಗಳಿಗೆ ಸಂಬAಧಿಸಿದ ಸಂಚಾರ ನಿಯಮ ಯಾವುದು? ನಗರದ ಒಳ ಪ್ರದೇಶಗಳಲ್ಲಿ ಅಥವಾ ಕಿರುದಾರಿ ಮಾರ್ಗಗಳಲ್ಲಿ ಚಲಿಸುವಾಗಲೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯವೇ? |
| | ವಾಹನವು ಚಾಲನೆಯಲ್ಲಿರುವಾಗ ಕಾರಿನಲ್ಲಿ ಪ್ರಯಾಣಿಸುತ್ತಿರುವವರು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ ೧೯೪-ಬಿ ರನ್ವಯ ಕಡ್ಡಾಯವಾಗಿ ಸೀಟ್‌ಬೆಲ್ಟ್ ಧರಿಸಬೇಕು. ನಗರದ ಒಳ ಪ್ರದೇಶಗಳಲ್ಲಿ ಅಥವಾ ಕಿರುದಾರಿ ಮಾರ್ಗಗಳಲ್ಲಿ ಚಲಿಸುವಾಗಲೂ ಸಹ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ. |
| | **ಸೆಲ್‌ಫೋನ್ ಬಳಕೆ** |
| 7 | ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬದಲಿಗೆ ಹ್ಯಾಂಡ್‌ಫ್ರೀ ಸಾಧನವನ್ನು ಬಳಸಬಹುದೇ? |
| | ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್‌ಗಳನ್ನು ಬಳಸುವುದು ಮಾತ್ರವಲ್ಲ ಹ್ಯಾಂಡ್‌ಫ್ರೀ ಸಾಧನಗಳನ್ನು (ಇಯರ್‌ಫೋನ್ ಗಳು, ಬ್ಲೂಟೂತ್ ಹೆಡ್‌ಸೆಟ್ ಇತ್ಯಾದಿ) ಉಪಯೋಗಿಸಿ ಮೊಬೈಲ್ ಫೋನ್‌ಗೆ ಸಂಪರ್ಕ ಪಡೆದುಕೊಳ್ಳುವುದು ಸಹ ಅಪರಾಧ. ರಸ್ತೆ ಮಾರ್ಗಗಳನ್ನು ತಿಳಿಸುವ ಆ್ಯಪ್‌ಗಳನ್ನು ಬಳಸುವ ಉದ್ದೇಶಕ್ಕಾಗಿ ಮಾತ್ರ ಚಾಲನೆ ಮಾಡುವಾಗ / ಸವಾರಿ ಮಾಡುವಾಗ ಮೊಬೈನ್ ಫೋನ್ ಬಳಸಬಹುದಾಗಿದೆ.<br>ಯಾವುದೇ ವ್ಯಕ್ತಿಯು ಮೋಟಾರು ವಾಹನವನ್ನು ಚಾಲನೆ ಮಾಡುವಾಗ ಅಥವಾ ಸವಾರಿ ಮಾಡುವಾಗ ಹ್ಯಾಂಡ್‌ಹೆಲ್ಡ್ ಸಂವಹನ ಸಾಧನಗಳನ್ನು (ಮೊಬೈಲ್ ಫೋನ್) ಉಪಯೋಗಿಸಬಾರದು. ಹಾಗೇನಾದರೂ ಬಳಸಿದರೆ ಭಾರತೀಯ ಮೋಟಾರು ವಾಹನ ಕಾಯ್ದೆ |

| | |
|---|---|
| | ಕಲಂ ೧೮೪ (ಸಿ) ಪ್ರಕಾರ ಅಪರಾಧವಾಗಿ ದ್ವಿಚಕ್ರ/ತ್ರಿಚಕ್ರ ವಾಹನಗಳಿಗೆ ೧೫೦೦/- ರೂ, ಲಘು ಮೋಟಾರು ವಾಹನಗಳಿಗೆ ೧೫೦೦/-ರೂ ಮತ್ತು ಇತರ ವಾಹನಗಳಿಗೆ ೫,೦೦೦/- ರೂಗಳ ದಂಡವನ್ನು, ಇದೇ ಉಲ್ಲಂಘನೆಗಳಿಗೆ ಎರಡನೇ ಮತ್ತು ನಂತರದ ಅಪರಾಧಕ್ಕೆ ೧೦,೦೦೦/- ರೂಗಳ ದಂಡ ವಿಧಿಸಲಾಗುತ್ತದೆ. |
| 8 | **ವಾಹನದಲ್ಲಿ ಸಂಚರಿಸುವ ಸಹ ಪ್ರಯಾಣಿಕರು ಮೊಬೈಲ್ ಫೋನ್ ಬಳಸಬಹುದೇ?** |
| | ಚಾಲಕನನ್ನು ಹೊರತುಪಡಿಸಿ ಮೋಟಾರು ವಾಹನದಲ್ಲಿ ಸಾಗುವ ಇತರರು ಮೊಬೈಲ್ ಫೋನ್ ಬಳಸಬಹುದು. ಆದಾಗ್ಯೂ ಪ್ರಯಾಣಿಕರು ಮೊಬೈಲ್ ಫೋನ್ ಅನ್ನು ತಮ್ಮ ಕೈಯಿಂದ ಚಾಲಕನ ಕಿವಿಗೆ ಹಿಡಿದು ಮಾತನಾಡಿಸುವುದನ್ನು ಸಹ ನಿಷೇಧಿಸಲಾಗಿದೆ. |
| 9 | **ನಾನೊಬ್ಬ ವೈದ್ಯನಾಗಿದ್ದು, ವಾಹನ ಚಲಾಯಿಸುತ್ತಿರುವಾಗ ತುರ್ತು ಕರೆ ಬಂದರೆ ನಾನು ಆ ಕರೆಯನ್ನು ಸ್ವೀಕರಿಸಬಹುದೇ?** |
| | ಈ ವಿಷಯದಲ್ಲಿ ಯಾರಿಗೂ ವಿನಾಯಿತಿ ಇಲ್ಲ. ಅಗತ್ಯ ಮುನ್ನೆಚ್ಚರಿಕೆಗಳೊಂದಿಗೆ ನಿಮ್ಮ ವಾಹನವನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಮೊಬೈಲ್ ಫೋನ್ ಬಳಸಬಹುದು. |
| | **ಅಪಘಾತ ಸಂದರ್ಭದಲ್ಲಿ** |
| 10 | **ಚಾಲನೆ ಮಾಡುತ್ತಿರುವ ವಾಹನವು, ಸಾವು/ತೀವ್ರ ಸ್ವರೂಪದ ಗಾಯ/ಆಸ್ತಿಗೆ ಧಕ್ಕೆ ಮುಂತಾದ ಘಟನೆಗಳಿಗೆ ತುತ್ತಾದಾಗ ಅದನ್ನು ಚಾಲನೆ ಮಾಡುತ್ತಿದ್ದ ಚಾಲಕನ ಕರ್ತವ್ಯಗಳೇನು?** |
| | **ಕರ್ತವ್ಯಗಳು ಈ ರೀತಿ ಇರುತ್ತವೆ.** |
| | • ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡಿ ತಕ್ಷಣ ಪೊಲೀಸರಿಗೆ ಸುದ್ದಿ ಮುಟ್ಟಿಸಬೇಕು,<br>• ಒಂದು ವೇಳೆ ವಾಹನವು ಪೆಟ್ರೋಲ್ ಅಥವಾ ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿದ್ದರೆ, ಯಾರೂ ಆ ವಾಹನದ ಬಳಿ ಸುಳಿಯದಂತೆ ನೋಡಿಕೊಳ್ಳಬೇಕು.<br>• ಸ್ಥಳದ ಬಳಿ ಸಿಗರೇಟ್ ಸೇದದಂತೆ ಎಚ್ಚರಿಕೆ ವಹಿಸಬೇಕು ಮತ್ತು<br>• ವಾಹನದಲ್ಲಿ ಪ್ರಚುರ ಪಡಿಸಿರುವ ಸುರಕ್ಷತಾ ನಿಯಮಗಳನ್ನು ತುರ್ತಾಗಿ ಪಾಲಿಸಬೇಕು. |
| | **ವಾಹನ ಟೋಯಿಂಗ್** |
| 11 | **ಯಾವ ಸಂದರ್ಭಗಳಲ್ಲಿ ವಾಹನಗಳನ್ನು ಟೋ ಮಾಡಲಾಗುತ್ತದೆ?** |
| | ಯಾವುದೇ ವ್ಯಕ್ತಿ ಸರಿಯಾದ ಕ್ರಮದಲ್ಲಿ ತನ್ನ ವಾಹನವನ್ನು ನಿಲ್ಲಿಸದೇ ಅಪಾಯಕಾರಿ ರೀತಿಯಲ್ಲಿ ನಿಲ್ಲಿಸಿದ್ದಲ್ಲಿ ಅಥವಾ ದೀರ್ಘಾವಧಿವರೆಗೆ ಸಾರ್ವಜನಿಕ ರಸ್ತೆಯಲ್ಲಿ ಬಿಟ್ಟಿದ್ದಲ್ಲಿ , ನಿಷೇಧಿಸಲ್ಪಟ್ಟ ಸ್ಥಳಗಳಲ್ಲಿ ವಾಹನವನ್ನು ನಿಲ್ಲಿಸಿರುವುದು ಇಲ್ಲವೇ ರಸ್ತೆ ಬಳಕೆದಾರರಿಗೆ ಅನಾನುಕೂಲತೆ ಮತ್ತು ಸುಗಮ ಸಂಚಾರಕ್ಕೆ ತೊಂದರೆಯಾಗುವ Aತಿರುವ ಸಂದರ್ಭಗಳಲ್ಲಿ ಆ ವಾಹನವನ್ನು ಟೋಯಿಂಗ್ ವಾಹನ ಬಳಸಿ ಬೇರೆಡೆ ಸ್ಥಳಾಂತರಿಸಲಾಗುವುದು. |
| | **ಮದ್ಯಪಾನ ಮಾಡಿ ಚಾಲನೆ** |

| | |
|---|---|
| 12 | ಯಾವುದೇ ಮಾದಕ ವಸ್ತುಗಳನ್ನು ಸೇವಿಸಿ ವಾಹನ ಚಲಾಯಿಸಿದರೆ ಶಿಕ್ಷೆ ಏನು? |
| | ೧೦೦ ಮಿಲಿ ಲೀಟರ್‌ಗೆ ೩೦ ಮಿಗ್ರಾಂ ಮೀರಿದ ರಕ್ತದಲ್ಲಿ ಆಲ್ಕೋಹಾಲ್ (ಬ್ಲಡ್ ಆಲ್ಕೋಹಾಲ್ ಕಂಟೆ Aಟ್) ಹೊಂದಿದ Oತ ವ್ಯಕ್ತಿ ವಾಹನವನ್ನು ಚಾಲನೆ ಮಾಡುತ್ತಿದ್ದರೆ ಅಥವಾ ಅವನು ಮಾದಕ ವಸ್ತುವಿನ ಪ್ರಭಾವಕ್ಕೆ ಒಳಗಾಗಿದ್ದರೆ , ವಾಹನದ ಮೇಲೆ ಸರಿಯಾದ ನಿಯಂತ್ರಣವನ್ನು ಸಾಧಿಸಲು ಅಸಮರ್ಥನಾಗಿದ್ದರೆ ಮೊದಲ ಅಪರಾಧಕ್ಕೆ ೬ ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ೧೦ ,೦೦೦ ರೂವರೆಗೆ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. |
| 13 | ಅನುಮತಿಸಲಾದ ಮಿತಿಗಿಂತ ಮೀರಿ ಮಾದಕ ಪಾನೀಕ ಸೇವನೆ ಮಾಡಿ ಏನೆಲ್ಲಾ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ? |
| | ನೀವು ಮದ್ಯದ ಪ್ರಭಾವದಿಂದ ವಾಹನ ಚಲಾಯಿಸಿ ಸಿಕ್ಕಿಬಿದ್ದರೆ ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಬಗ್ಗೆ ಕೋರ್ಟಿಗೆ ಹಾಜರಾಗಲು ನೊಟೀಸ್ ನೀಡಲಾಗುವುದು. ಈ ಕೇಸಿಗೆ ಸಂಬAಧಿಸಿದAತೆ ಸ್ಥಳದಲ್ಲೇ ದಂಡವನ್ನು ಸ್ವೀಕರಿಸುವುದಿಲ್ಲ. ದಂಡ ವಿಧಿಸಲು ನ್ಯಾಯಾಲಯಕ್ಕೆ ಮಾತ್ರ ಅಧಿಕಾರವಿದೆ. ನಿಮ್ಮ ಜೊತೆ ಮದ್ಯಪಾನ ಮಾಡದೇ , ಚಾಲನಾ ಪರವಾನಿಗೆ ಹೊಂದಿರುವ ಜೊತೆಗಾರನನ್ನು ಹೊಂದಿಲ್ಲದಿದ್ದರೆ ವಾಹನ ಚಾಲನೆಯನ್ನು ಮುಂದುವರೆಸಲು ನಿಮಗೆ ಅನುಮತಿಸಲಾಗುವುದಿಲ್ಲ.<br><br>ಅಥವಾ<br><br>ನಿಮಗೆ ಬಾಡಿಗೆಯ ವಾಹನವೊಂದನ್ನು ಗೊತ್ತು ಮಾಡಿಕೊಳ್ಳುವಂತೆ ತಿಳಿಸಲಾಗುತ್ತದೆ. ನಿಮ್ಮ ವಾಹನವನ್ನು ಠಾಣೆಯ ಆವರಣದಲ್ಲಿ ಇಟ್ಟುಕೊಳ್ಳಲಾಗುತ್ತದೆ. ನೀವು ಕೋರ್ಟ್ನಲ್ಲಿ ದಂಡ ಪಾವತಿಸಿದ ನಂತರ ವಾಹನವನ್ನು ನಿಮ್ಮ ವಶಕ್ಕೆ ಕೊಡಲಾಗುತ್ತದೆ ಆದರೆ ನಿಮ್ಮ ಚಾಲನಾ ಪರವಾನಗಿಯನ್ನು ಸಂಬ Aಧಪಟ್ಟ ಆರ್.ಟಿ.ಓ. ಪ್ರಾಧಿಕಾರಕ್ಕೆ ಕುಡಿದು ವಾಹನವನ್ನು ಚಲಾಯಿಸಿದ್ದಕ್ಕಾಗಿ ಅಮಾನತ್ತುಗೊಳಿಸಲು ಕಳುಹಿಸಿಕೊಡಲಾಗುತ್ತದೆ. ನೀವು ಈ ಮುಂಚೆಯೂ ಇದೇ ಕುಡಿದು ವಾಹನವನ್ನು ಓಡಿಸುವ ನಿಯಮ ಉಲ್ಲಂಘನೆಯನ್ನು ಮಾಡಿದ್ದಕ್ಕಾಗಿ ದಂಡ ತೆತ್ತಿದ್ದರೆ ಎರಡನೇ ಬಾರಿ ದಂಡವು ಇನ್ನೂ ಹೆಚ್ಚಾಗುತ್ತದೆಯಲ್ಲದೆ ಕಾರಾಗೃಹ ವಾಸವನ್ನೂ ಸಹ ಶಿಕ್ಷೆಯಾಗಿ ವಿಧಿಸಲಾಗುವುದು.<br><br>ನೀವು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿ ಯಾರನ್ನೇ ಆಗಲಿ ಅಪಘಾತದಲ್ಲಿ ಬಲಿ ಪಡೆದುಕೊಂಡರೆ ನಿಮ್ಮ ವಿರುದ್ಧ ಅಪರಾಧಿಕ ನರಹತ್ಯೆ ಆದರೆ ಕೊಲೆಯಲ್ಲ ಎಂಬ ಕಲಂನಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತದೆ ಮತ್ತು ಇದು ಜಾಮೀನು ರಹಿತ ಅಪರಾಧವಾಗಿರುತ್ತದೆ. |
| 14 | ವಾಹನವನ್ನು ಚಲಾಯಿಸುತ್ತಿರುವ ವ್ಯಕ್ತಿಯು ಮದ್ಯಪಾನ ಮಾಡಿದ್ದಾನೆ ಎಂದು ಅನುಮಾನಿಸಿ ಪೊಲೀಸರು ಅವರ ಉಸಿರಿನ ಪರೀಕ್ಷೆಯನ್ನು ತೆಗೆದುಕೊಳ್ಳಬಹುದೇ? ಪೊಲೀಸರು ಬಳಸುವ ಆಲ್ಕೋಮೀಟರ್‌ಗಳು ನಿಖರವಾಗಿ ಫಲಿತಾಂಶವನ್ನು ನೀಡಬಲ್ಲವೇ? ಯಾವ ಸಂದರ್ಭದಲ್ಲಿ ಡ್ರಂಕ್ ಅಂಡ್ ಡ್ರೆöÊವ್ ಕೇಸನ್ನು ಹಾಕಲಾಗುತ್ತದೆ? ಇದಕ್ಕೆ ದಂಡ ಕಟ್ಟುವ ಪ್ರಕ್ರಿಯೆಯ ವಿವರಗಳನ್ನು ಕೊಡಿ? |
| | ಮದ್ಯ ಸೇವನೆ ಪ್ರಮಾಣ ಅನುಮತಿಸಿರುವುದಕ್ಕಿಂದ ಮಿತಿಯನ್ನು ಮೀರಿ ವಾಹನ ಚಲಾಯಿಸಿದ ಅಪರಾಧಕ್ಕೆ ಚಾಲಕ/ಸವಾರ ಗುರಿಯಾಗುತ್ತಾನೆ. ೧೦೦ ಮಿಲಿ ರಕ್ತಕ್ಕೆ ೩೦ ಮಿ.ಗ್ರಾಂ ಆಲ್ಕೋಹಾಲ್ ಅನ್ನು ಕಾನೂನು ಅನುಮತಿಸಿರುವ ಮಿತಿ. ಟ್ರಾಫಿಕ್ ಪೊಲೀಸರು ಅತ್ಯಾಧುನಿಕ ಆಲ್ಕೋ ಮೀಟರ್‌ಗಳನ್ನು (ಉಸಿರಾಟದ ವಿಶ್ಲೇಷಕಗಳನ್ನು) ಬಳಸುತ್ತಾರೆ. ಇದನ್ನು ಉಸಿರಿನಲ್ಲಿರುವ |

ಆಲ್ಕೋಹಾಲ್ ಮಟ್ಟವನ್ನು
ಅಳೆಯಲು ವಿಶ್ವದಾದ್ಯಂತ ಅಂಗೀಕರಿಸಲಾಗಿದೆ. ಇದು ಪ್ರಪಂಚದಾದ್ಯAತ ವೈಜ್ಞಾನಿಕವಾಗಿ ಮತ್ತು ಕಾನೂನುಬದ್ಧವಾಗಿ ಅಂಗೀಕರಿಸಲ್ಪಟ್ಟ ವಿಧಾನವಾಗಿದೆ. ಈ ಉಪಕರಣಗಳನ್ನು ಮೂರು ತಿಂಗಳಿಗೊಮ್ಮೆ +/- ೫% ದೋಷದಿಂದ ಮಾಪನಾಂಕ ಮಾಡಲಾಗುತ್ತದೆ. ಕಾನೂನು ಮಿತಿ ಕೇವಲ ೩೦ ಆಗಿದ್ದರೂ ೧೦೦ ಮಿಲಿಗೆ ೪೦ ಮಿಗ್ರಾಂಗಿAಡ ಕಡಿಮೆ ಇರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಿಲ್ಲ.

ಆದಾಗ್ಯೂ ಪ್ರತಿಯೊಬ್ಬರನ್ನು ಉಸಿರಾಟದ ಪರೀಕ್ಷೆಗೆ ಒಳಪಡಿಸಲಾಗುವುದಿಲ್ಲ. ತಪಾಸಣೆ ವೇಳೆ ಮೊದಲು ಆಲ್ಕೋಮೀಟರ್ ಅನ್ನು “ತಟಸ್ಥ ಮೋಡ್: ( Pಚಿssive ಒಂಜe) ಇಟ್ಟು ಕೊಳವೆಯನ್ನು ಮುಟ್ಟದೆ ವಾಹನ ಚಾಲಕ/ಸವಾರನಿಗೆ ಆಲ್ಕೋಮೀಟರ್‌ನಲ್ಲಿ ಊದಲು ತಿಳಿಸಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಫಲಿತಾಂಶವು ಋಣಾತ್ಮಕವಾಗಿದ್ದರೆ (ಓ egಚಿಣive) ಹೆಚ್ಚಿನ ಪರಿಶೀಲನೆ ಅಗತ್ಯವಿಲ್ಲ. ಫಲಿತಾಂಶವು ಧನಾತ್ಮಕವಾಗಿದ್ದರೆ ಅಂದರೆ ಪ್ರತಿ ೧೦೦ ಮಿಲಿಗೆ ೪೦ ಮಿಗ್ರಾಂಕ್ಕಿ Aತ ಹೆಚ್ಚಿದ್ದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. ಪಿಡಿಎ ಮುಖಾಂತರ ಪೊಲೀಸ್ ನೋಟೀಸ್ ಅನ್ನು ವಾಹನ ಚಾಲಕನಿಗೆ ನೀಡಲಾಗವುದು. ಯಾರಿಗೇ ಆಗಲಿ ಆಲ್ಕೋಹಾಲ್ ಅಂಶದ ಪ್ರಮಾಣವನ್ನು ಮುದ್ರಿತ ಚಲನ್‌ನ ಪ್ರಿಂಟ್ ಔಟ್ ನೀಡದೆ ಪೊಲೀಸ್ ನೋಟೀಸ್ ಅನ್ನು ನೀಡದೆ ಕಾನೂನು ಕ್ರಮಕ್ಕೆ ಒಳಪಡಿಸಲಾಗದು.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರಿಗೆ ಸ್ಥಳದಂಡವನ್ನು ವಿಧಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಯಾವುದೇ ಪೊಲೀಸ್ ಅಧಿಕಾರಿಯು ಈ ಪ್ರಕರಣದಲ್ಲಿ ಸ್ಥಳದಂಡವನ್ನು ಕಟ್ಟಿಸಿಕೊಳ್ಳುವಂತಿಲ್ಲ. ನಿಯಮ ಉಲ್ಲಂಘನೆ ಮಾಡುವವರಿಗೆ ಒಂದು ನೋಟೀಸನ್ನು ನೀಡಿ ವ್ಯಾಪ್ತಿಯ ಸಂಚಾರ ನ್ಯಾಯಾಲಯದಲ್ಲಿ ಹಾಜರಾಗುವಂತೆ ಸೂಚಿಸಲಾಗುತ್ತದೆ. ಅವರು ಘನ ನ್ಯಾಯಾಲಯದಲ್ಲಿ ಹಾಜರಾಗಿ ನ್ಯಾಯಾಲಯವು ರೂ ೧೦ ,೦೦೦/- ವರೆಗೆ ವಿಧಿಸುವ ದಂಡವನ್ನು ಪಾವತಿಸಿ ಅಥವಾ ೬ ತಿಂಗಳ ಜೈಲು ಶಿಕ್ಷೆಯನ್ನು ಅನುಭವಿಸಿ ಅಥವಾ ಎರಡರಿಂದಲೂ ದಂಡಿತನಾಗುವAತೆ ನ್ಯಾಯಾಲಯವು ಆದೇಶಿಸಬಹುದಾಗಿದೆ. ಅದೇ ವ್ಯಕ್ತಿಯು ೨ನೇ ಬಾರಿ ಈ ಕೃತ್ಯವನ್ನು ಎಸಗಿದರೆ ನ್ಯಾಯಾಲಯವು ಆತನಿಗೆ ೨ ವರ್ಷಗಳ ಕಾಲು ಜೈಲು ಶಿಕ್ಷೆ ಅಥವಾ ೧೫೦೦೦/- ರೂಗಳ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿರುತ್ತದೆ.

ಪೊಲೀಸ್ ನೋಟೀಸನ್ನು ನೀಡಿದ ನಂತರ ವಾಹನದ ಚಾಲಕನಿಗೆ ತನ್ನ ವಾಹನವನ್ನು ಕೊಂಡೊಯ್ಯಲು ಬಿಡುವುದಿಲ್ಲ. ಆತನು ತನ್ನ ವಾಹನವನ್ನು ಪೊಲೀಸರ ಬಳಿಯೇ ಬಿಟ್ಟು ಕ್ಯಾಬ್ ಅಥವಾ ಆಟೋರಿಕ್ಷಾ ಬಳಸಿ ಅಥವಾ ಸ್ನೇಹಿತರನ್ನಾಗಲೀ , ಬಂಧು-ಮಿತ್ರ ರನ್ನಾಗಲೀ ಕರೆಯಿಸಿಕೊಂಡು ಮನೆ ಸೇರಬಹುದಾಗಿರುತ್ತದೆ. ಒಂದು ವೇಳೆ ವಾಹನವನ್ನು ಬಿಡಲೇಬೇಕೆಂದು ಆಗ್ರಹಿಸಿದ ಪಕ್ಷದಲ್ಲಿ ವಾಹನದ ಮೂಲ ದಾಖಲಾತಿಗಳನ್ನು ಒಪ್ಪಿಸಿ ಮದ್ಯಪಾನ ಮಾಡಿರದ ಮತ್ತು ಸದರಿ ವಾಹನವನ್ನು ಚಲಾಯಿಸಲು ಚಾಲನಾ ಅನುಜ್ಞಾ ಪತ್ರವನ್ನು ಹೊಂದಿರುವಂತ ಸ್ನೇಹಿತನ ಜೊತೆಗೆ ಹೋಗಬಹುದಾಗಿದೆ. ಇಂತಹ ಸಂದರ್ಭದಲ್ಲಿ ಸಾಕಷ್ಟು ಜನ ಸಾರ್ವಜನಿಕರು ಸಂಚಾರ ಪೊಲೀಸರಿಗೆ ಲಂಚವನ್ನು ಕೊಡಲು ಪ್ರಯತ್ನಿಸುತ್ತಾರೆ. ಆದ್ದರಿಂದ ಇಂತಹ ಪ್ರಕರಣಗಳು ತಗ್ಗಲು ಸಾರ್ವಜನಿಕರು ಕಾನೂನು ರೀತ್ಯಾ ಇರುವ ಪ್ರಕ್ರಿಯೆಯನ್ನು ಅನುಸರಿಸಬೇಕು. ಯಾವುದೇ ವ್ಯಕ್ತಿಯು ಮದ್ಯಪಾನ ಮಾಡಿ ವಾಹನವನ್ನು ಚಾಲನೆ ಮಾಡುತ್ತಾ ಮತ್ತೊಬ್ಬ ವ್ಯಕ್ತಿಯ ಸಾವಿಗೆ ಕಾರಣನಾದಲ್ಲಿ ಆತನಿಗೆ ಕೊಲೆಯೆಂದು ಪರಿಗಣಿಸಲಾಗದ ಅಪರಾಧಿಕ ಮಾನವ ಹತ್ಯೆಗೆ ದಂಡನೆ ಎಂದು ಪರಿಗಣಿತವಾಗುತ್ತದೆ. ಈ ಅಪರಾಧವು ಜಾಮೀನು ರಹಿತ ಅಪರಾಧವಾಗಿರುತ್ತದೆ ಎಂಬುದು ನೆನಪಿರಲಿ.

| | |
|---|---|
| 15 | **ನಾನು ಮದ್ಯಪಾನ ಮಾಡಿ ವಾಹನ ಚಲಾಯಿಸುವಾಗ ಸಿಕ್ಕಿ ಬಿದ್ದು, ಆನಂತರ ಈ ಬಗ್ಗೆ ನ್ಯಾಯಾಲಯದಲ್ಲಿ ಹಾಜರಾಗದಿದ್ದಲ್ಲಿ ಏನು ಪರಿಣಾಮವಾಗುತ್ತದೆ. ?** |
| | ನೀವು ನ್ಯಾಯಾಲಯದಲ್ಲಿ ಹಾಜರಾಗದಿದ್ದ ಪಕ್ಷದಲ್ಲಿ ನ್ಯಾಯಾಲಯವು ನಿಮ್ಮ ಹೆಸರಿನಲ್ಲಿ ದಸ್ತಗಿರಿ ವಾರೆಂಟ್‌ನ್ನು ಹೊರಡಿಸುತ್ತದೆ. ಮತ್ತು ನಿಮಗೆ ಹೆಚ್ಚಿನ ದಂಡ ವಿಧಿಸಲೂಬಹುದು. |
| 16 | **ನಾನು ಎಷ್ಟು ಪ್ರಮಾಣದಲ್ಲಿ ಮದ್ಯಪಾನ ಮಾಡಿದರೆ ಕಾನೂನಿನ ನಿಗದಿತ ಪ್ರಮಾಣದ ಒಳಗಡೆ ಉಳಿಯಬಹುದಾಗಿದೆ?** |
| | ಈ ಪ್ರಶ್ನೆಗೆ ನಿಖರವಾದ ಉತ್ತರವಿಲ್ಲ ಏಕೆಂದರೆ ಇದು ಪ್ರತಿಯೊಬ್ಬ ವ್ಯಕ್ತಿಯ ದೈಹಿಕ ಅಂಶಗಳು , ಲಿಂಗ ಮತ್ತು ಆಲ್ಕೋಹಾಲನ್ನು ಹಸಿದ ಹೊಟ್ಟೆಯಲ್ಲಿ ಸೇವಿಸಿರುವರೋ ಅಥವಾ ಆಹಾರದ ಸಮೇತ ಸೇವಿಸಿರುವರೋ ಮತ್ತು ಎಷ್ಟು ಹೊತ್ತು ಮದ್ಯಪಾನ ಮಾಡಿದ್ದಾರೆ ಮತ್ತು ಎಷ್ಟು ಪ್ರಮಾಣದಲ್ಲಿ ಮಾಡಿದ್ದಾರೆ ಎಂಬುದರ ಮೇಲೆ ನಿರ್ಧರಿತವಾಗಿದೆ. ಸಾಮಾನ್ಯವಾಗಿ ಒಂದು ಬಾಟಲ್ ಬಿಯರ್/ ೩೦ ಎಂ.ಎಲ್. ವಿಸ್ಕಿ ಸೇವನೆ ಪರವಾಗಿಲ್ಲವೆಂದು ಭಾವಿಸಲಾಗಿದೆ. ನಮ್ಮ ದೇಹದಲ್ಲಿನ ಚಯಾಪಚಯ ಕ್ರಿಯೆಯು ಗಂಟೆಗೆ ೧೦ ಯುನಿಟ್‌ಗಳಷ್ಟು ಆಲ್ಕೋಹಾಲನ್ನು ಜೀರ್ಣಗೊಳಿಸುತ್ತದೆ. ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಆಲ್ಕೋಹಾಲ್ ಸೇವನೆ ಮಾಡಿದ್ದಲ್ಲಿ ಅದು ಬಿ.ಎ.ಸಿಯಲ್ಲಿ ಕಂಡುಬರುತ್ತದೆ. |
| 17 | **ಆಲ್ಕೋಮೀಟರ್ ಪರೀಕ್ಷೆಯಲ್ಲಿ ಬಳಸುವ ಸ್ಟ್ರಾವನ್ನು ಬೇರೆಯವರು ಬಳಸಿಲ್ಲ ಎಂದು ನಾನು ಹೇಗೆ ಖಾತ್ರಿ ಪಡಿಸಿಕೊಳ್ಳುವುದು?** |
| | ಸಂಚಾರ ಪೊಲೀಸರಿಗೆ ನೀಡಿರುವ ಸೂಚನೆಗಳಲ್ಲಿ ಕೇವಲ ಒಮ್ಮೆ ಬಳಕೆ ಮಾಡಿ ಎಸೆಯುವ(ಡಿಸ್‌ಪೋಸೆಬಲ್) ಸ್ಟ್ರಾಗಳನ್ನು ಮಾತ್ರ ನೀಡಬೇಕೆಂದು ಸೂಚನೆ ನೀಡಲಾಗಿದೆ. ನೀವು ಸಂಚಾರ ಪೊಲೀಸರು ಕೊಡುವ ಸ್ಟ್ರಾದ ಸುತ್ತಾ ಪೇಪರ್ ಪ್ಯಾಕ್ ಇದ್ದು, ಅದನ್ನು ತೆಗೆದ ನಂತರವೇ ಬಳಸಬೇಕು. ಕವರ್ ಹರಿದಿದ್ದಲ್ಲಿ ಬೇರೊಂದನ್ನು ಕೇಳಿ ಪಡೆಯಬೇಕು.<br>ವಾಹನಗಳನ್ನು ವಶಕ್ಕೆ ಪಡೆಯುವಿಕೆ |
| 18 | **ಸಂಚಾರ ಪೊಲೀಸರು ಯಾವ ಯಾವ ಸಂದರ್ಭಗಳಲ್ಲಿ ನಮ್ಮ ವಾಹನಗಳನು ತಮ್ಮ ವಶಕ್ಕೆ ಪಡೆಯಬಹುದು?** |
| | ಸಂಚಾರ ಪೊಲೀಸರು ಈ ಕೆಳಕಂಡ ಸಂದರ್ಭಗಳಲ್ಲಿ ವಾಹನವನ್ನು ತಮ್ಮ ವಶಕ್ಕೆ ಪಡೆಯಬಹುದು. |
| | • ಚಾಲಕ/ಸವಾರ ಪರವಾನಗಿ ಹೊಂದಿಲ್ಲದೆ ಇರುವ ಪಕ್ಷದಲ್ಲಿ.<br>• ವಾಹನದ ನೋಂದಣಿ ಆಗದೇ ಇದ್ದ ಪಕ್ಷದಲ್ಲಿ<br>• ಪರವಾನಗಿ ಇಲ್ಲದೇ ಸಾರಿಗೆ ವಾಹನವನ್ನು ಚಾಲನೆ ಮಾಡುತ್ತಿದ್ದಲ್ಲಿ ಅಥವಾ ಪರ್ಮಿಟ್ ನಿಬಂಧನೆಗಳನ್ನುಉಲ್ಲAಘಿಸಿ ಚಾಲನೆ ಮಾಡುತ್ತಿದ್ದಲ್ಲಿ.<br>• ವಾಹನದ ತೆರಿಗೆಯನ್ನು ಪಾವತಿಸದೆ ವಾಹನವನ್ನು ಚಾಲನೆ ಮಾಡುತ್ತಿದ್ದ ಪಕ್ಷದಲ್ಲಿ<br>• ಸವಾರ/ಚಾಲಕ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಪಕ್ಷದಲ್ಲಿ<br>• ವಾಹನವು ಗುರುತರ ಅಪರಾಧದಲ್ಲಿ ಬಳಕೆಯಾಗಲ್ಪಟ್ಟಿದೆ ಎಂದು ಸಂಶಯವಿದ್ದಲ್ಲಿ. |
| | **ಶಿರಸ್ತ್ರಾಣ ಧರಿಸುವ ಬಗ್ಗೆ.** |

| | |
|---|---|
| 19 | ದ್ವಿಚಕ್ರ ವಾಹನದ ಸವಾರರು ಮತ್ತು ಹಿಂಬದಿಯ ಸವಾರರು ಶಿರಸ್ತ್ರಾಣ ಧರಿಸುವುದು ಕಡ್ಡಾಯವೇ? |
| | ಹೌದು, ಮೋಟಾರು ವಾಹನ ಕಾಯ್ದೆ ೧೨೯ ರ ರಿತ್ಯಾ ೪ ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು ಭಾರತೀಯ ಮಾನಕ ಬ್ಯೂರೋರವರು ಪ್ರಮಾಣಿಸಿರುವ ಐ.ಎಸ್.ಐ ಶಿರಸ್ತ್ರಾಣವನ್ನು ಸರಿಯಾಗಿ ಚಿನ್‌ಸ್ಟ್ರಿಪ್ ಹಾಕಿಕೊಂಡು ವ್ಯವಸ್ಥಿತವಾಗಿ ಧರಿಸಿಕೊಳ್ಳಬೇಕು. ಆದಾಗ್ಯೂ ಸಿಖ್ ಸಮುದಾಯದ ಬಾಂಧವರು ಟರ್ಬನ್ ಧರಿಸುವುದರಿಂದ ಅವರಿಗೆ ಈ ನಿಯಮದಿಂದ ವಿನಾಯಿತಿಯನ್ನು ನೀಡಲಾಗಿದೆ. ಹೆಲ್ಮೆಟ್ ಧರಿಸದೇ ಇದ್ದಲ್ಲಿ ಸೆಕ್ಷನ್ ೧೯೪ಡಿ ಮೋಟಾರು ವಾಹನ ಕಾಯ್ದೆ (ಅಮೆಂಡ್‌ಮೆಂಟ್) ಆಕ್ಟ್ ೨೦೧೯ ರ ಪ್ರಕಾರ ದಂಡವು ರೂ. ೫೦೦ ಆಗಿರುತ್ತದೆ. ಜೊತೆಗೆ ಹೆಲ್ಮೆಟ್ ಧರಿಸದ ದ್ವಿಚಕ್ರ ಸವಾರನ ಅಥವಾ ಹಿಂಬದಿ ಸವಾರನು ಹೆಲ್ಮೆಟ್ ಧರಿಸದಿದ್ದ ಪಕ್ಷದಲ್ಲಿ ಸಹ ಸವಾರನ ಚಾಲನಾ ಅನುಜ್ಞಾ ಪತ್ರವನ್ನು ೩ ತಿಂಗಳ ಕಾಲ ಅಮಾನತ್ತುಗೊಳಿಸಲಾಗುತ್ತದೆ. |
| | **ವಾಯು ಮಾಲಿನ್ಯ ತಪಾಸಣಾ ಪತ್ರ** |
| 20 | **ವಾಯು ಮಾಲಿನ್ಯ ತಪಾಸಣೆಯ ಬಗ್ಗೆ.** |
| | ಪ್ರತಿಯೊಬ್ಬ ಮೋಟಾರು ವಾಹನ ಚಾಲಕನು ಚಾಲ್ತಿಯಲ್ಲಿರುವ ವಾಯುಮಾಲಿನ್ಯ ಪರೀಕ್ಷಣಾ ತಪಾಸಣಾ ಪತ್ರವನ್ನು ಹೊಂದಿರುವುದು ಕಡ್ಡಾಯ. ಆದರೆ ಕೇವಲ ಇದನ್ನು ಪರಿಶೀಲಿಸಲು ಮಾತ್ರವೇ ವಾಹನಗಳನ್ನು ನಿಲ್ಲಿಸಬಾರದೆಂದು ಸಂಚಾರ ಪೊಲೀಸರಿಗೆ ಸೂಚಿಸಲಾಗಿದೆ. |
| | **ಇತರೆ ರಾಜ್ಯಗಳಲ್ಲಿ ನೋಂದಣಿಯಾಗಿರುವ ವಾಹನಗಳು** |
| 21 | **ಕೇವಲ ಒಂದು ವಾಹನವು ಹೊರರಾಜ್ಯದಲ್ಲಿ ನೋಂದಾವಣಿಯಾಗಿರುವ ಕಾರಣಕ್ಕೆ ಸಂಚಾರ ಪೊಲೀಸರು ಆ ವಾಹನಕ್ಕೆ ದಂಡ ವಿಧಿಸಬಹುದೇ?** |
| | ಇಲ್ಲ. ಸಂಚಾರ ಪೊಲೀಸರು ಇತರೆ ರಾಜ್ಯಗಳಲ್ಲಿ ನೋಂದಾವಣಿಯಾದ ವಾಹನಗಳ ನಂಬರ್‌ಪ್ಲೇಟ್ ಗಮನಿಸಿ ಪ್ರಕರಣ ದಾಖಲಿಸುವಂತಿಲ್ಲ. ಇತರ ಹೊರರಾಜ್ಯದ ವಾಹನಗಳನ್ನು ಮಾತ್ರವೇ ನಿಲ್ಲಿಸುವುದು ಸಂಚಾರ ಪೊಲೀಸರ ಉದ್ದೇಶವೂ ಅಲ್ಲ. |
| | **ಅಪಘಾತದ ಪರಿಹಾರದ ಬಗ್ಗೆ.** |
| 22 | **ನನ್ನ ವಾಹನವು ರಸ್ತೆ ಅಪಘಾತವೊಂದರಲ್ಲಿ ಜಖಂಗೊ ADಿದ್ದು, ಸಂಚಾರ ಪೊಲೀಸರು ಎದುರು ಪಾರ್ಟಿಯಿಂದ ನನಗೆ ಯಾವುದೆ ಪರಿಹಾರವನ್ನು ಕೊಡಿಸಲು ಸಹಕರಿಸಲಿಲ್ಲ.** |
| | ಕೇವಲ ವಿಮಾ ಕಂಪನಿಗಳು ಮಾತ್ರ ನಿಮ್ಮ ವಾಹನದ ರಿಪೇರಿ ಖರ್ಚನ್ನು ನೀಡುತ್ತವೆಯೇ ಹೊರತು ಸಂಚಾರ ಪೊಲೀಸರು ಅದನ್ನು ಅಪಘಾತ ಮಾಡಿದ ಮತ್ತೊಬ್ಬ ವ್ಯಕ್ತಿಯಿಂದ ಕೊಡಿಸಲು ಕಾನೂನಿನಿಂದ ನಿರ್ದೇಶಿತರಾಗಿಲ್ಲ. ಪೊಲೀಸರು ಅಪಘಾತ ಮಾಡಿದವರ ಮೇಲೆ ಕಾನೂನು ರಿತ್ಯಾ ಅಪಾಯಕಾರಿ ಚಾಲನೆಗೆ ಮಾತ್ರ ಪ್ರಕರಣವನ್ನು ದಾಖಲಿಸಬಹುದಾಗಿದೆ. ಹೆಚ್ಚಿನ ಮೊತ್ತದ ಪರಿಹಾರಕ್ಕಾಗಿ ಕ್ಲೆöÊಂಗಳನ್ನು ನ್ಯಾಯಾಲಯದಲ್ಲಿ ವ್ಯಾಜ್ಯ ದಾಖಲಿಸಿ ಪಡೆದುಕೊಳ್ಳಬಹುದಾಗಿದೆ. |
| | **ಸಂಚಾರ ನಿಯಮ ಉಲ್ಲಂಘನೆಗಳು** |
| 23 | ನಾನು ಸಂಚಾರ ದೀಪವನ್ನು ಗಮನಿಸಿ ಅದು ಹಸಿರಾಗಿದ್ದುದ್ದರಿಂದ ಸ್ಟಾಪ್‌ಲೇನ್ ಕ್ರಾಸ್ ಮಾಡಿ ಮುಂದೆ ಹೋದೆ. ಆದರೆ ನನ್ನ |

| | |
|---|---|
| | ಮುಂದಿರುವ ವಾಹನವು ಸಂಪೂರ್ಣವಾಗಿ ದಾಟದೇ ಇದ್ದುದ್ದರಿಂದ ನಾನು ಜಂಕ್ಷನ್‌ನ್ ಮದ್ಯದಲ್ಲಿ ಸಿಕ್ಕಿಕೊಂಡೆನು. ಇದಕ್ಕಾಗಿ ನನಗೆ ದಂಡ ಹಾಕಲಾಯಿತು. ಏಕೆ? |
| | ನಿಮಗೆ ಹಸಿರು ಸಿಗ್ನಲ್ ಇದ್ದರೂ ಸಹ ನಿಮ್ಮ ಮುಂದಿರುವ ವಾಹನವು ಜಂಕ್ಷನ್‌ನ್ನು ಪಾರು ಮಾಡಿ ಮುಂದೆ ಹೋಗುತ್ತಿದೆ ಎಂಬುವ ಭರವಸೆ ಇಲ್ಲದಿದ್ದಲ್ಲಿ ನೀವು ಸ್ಟಾಪ್ ಲೈನನ್ನು ದಾಟಬಾರದು ಏಕೆಂದರೆ ಇತರ ದಿಕ್ಕುಗಳಿಂದ ವಾಹನಗಳು ಅವುಗಳಿಗೆ ಹಸಿರು ಬಣ್ಣ ಸಿಕ್ಕಾಗ ಮುಂದಕ್ಕೆ ಹೋಗಲಾರವು. |
| 24 | **ನಾನು ಸಂಚಾರ ದೀಪವು ಕೆಂಪು ಬಣ್ಣಕ್ಕೆ ಬರುವುದಕ್ಕೆ ಮುಂಚೆ ಅಂದರೆ ಅದು ಹಳದಿ ಬಣ್ಣದಲ್ಲಿರುವಾಗಲೇ ಸ್ಟಾಪ್‌ಲೇನನ್ನು ಕ್ರಾಸ್ ಮಾಡಿರುತ್ತೇನೆ. ಆದರೆ ಜಂಕ್ಷನ್‌ನಲ್ಲಿನ ದಟ್ಟಣೆಯಿಂದ ನಾನು ಜಂಕ್ಷನ್ ಕ್ರಾಸ್ ಮಾಡಲು ಸಾಧ್ಯವಾಗಿರುವುದಿಲ್ಲ. ಆದರೆ ನಾನು ಸಿಗ್ನಲ್ ಜಂಪ್ ಮಾಡಿದ್ದೇನೆಂದು ದಂಡ ವಿಧಿಸಿರುವುದು ಏಕೆ?** |
| | ಹಳದಿ ದೀಪವು ಈಗಾಗಲೇ ಸ್ಟಾಪ್ ಲೇನನ್ನು ಮೀರಿ ಮುಂದೆ ಹೋದ ವಾಹನಗಳಿಗೆ ಜಂಕ್ಷನನ್ನು ದಾಟಿ ಮುಂದಿ ಹೋಗಲು ಮಾತ್ರ ಅವಕಾಶವನ್ನು ಕಲ್ಪಿಸುತ್ತದೆ. ಸ್ಟಾಪ್‌ಲೈನ್‌ನಿಂದ ಹಿಂದೆ ನೀವಿದ್ದಾಗ ಹಳದಿ ಬಣ್ಣದ ದೀಪ ಕಂಡಾಗ ವಾಹನವನ್ನು ಜಂಕ್ಷನ್‌ನಿ ಂದ ಮುಂದೆ ದಾಟಿ ಕೊಂಡೊಯ್ಯಬಾರದು. |
| 25 | **ಜಂಕ್ಷನ್‌ಗಳ ಮದ್ಯದಲ್ಲಿ ಕ್ರಿಸ್ ಕ್ರಾಸ್ ಪೈಂಟಿAಗ್ ಮಾಡಿರುತ್ತಾರೆ ಏಕೆ?** |
| | ಕ್ರಿಸ್ ಕ್ರಾಸ್ ಮಾಡಿರುವ ಜಂಕ್ಷನ್‌ಗಳಲ್ಲಿ ತಾತ್ಕಾಲಿಕವಾಗಿ ಒಂದು ಕ್ಷಣವೂ ಸಹ ಯಾವುದೆ ವಾಹನವು ನಿಂತುಕೊಳ್ಳಬಾರದು. ಏಕೆಂದರೆ ವಾಹನಗಳು ಈ ಪಟ್ಟಿಗಳ ಮೇಲೆ ನಿಂತರೆ ಇತರೆ ವಾಹನಗಳಿಗೆ ಅಡ್ಡಿಯಾಗುತ್ತದೆ ಮತ್ತು ಗ್ರಿಡ್ ಲಾಕ್ ಉಂಟಾಗುತ್ತದೆ. ಆದ್ದರಿಂದ ಅವುಗಳನ್ನು ಕ್ರಿಸ್ ಕ್ರಾಸ್ ರೀತಿಯಲ್ಲಿ ಹಳದಿ ಅಥವಾ ಬಿಳಿ ಪಟ್ಟೆಗಳನ್ನು ಹಾಕಲಾಗಿರುತ್ತದೆ. |
| | **ವೇಗದ ಮಿತಿ** |
| 26 | **ನಗರದಲ್ಲಿ ಎಲ್ಲಿಯೂ ವೇಗಮಿತಿ ತಿಳಿಸುವ ಸೂಚನಾ ಫಲಕವನ್ನು ನಾನು ನೋಡಿರುವುದಿಲ್ಲ?** |
| | ಬೆಂಗಳೂರು ನಗರ ಪೊಲೀಸ್ ಆಯುಕ್ತರವರ ಕಛೇರಿಯ ಅಧಿಸೂಚನೆ ಸಂಖ್ಯೆ: ೨೪೮/ಟಿಡಿ/ಸಿಓಪಿ/೨೦೧೪ ದಿನಾಂಕ:೨೦/೧೧/೨೦೧೪ರ ಕರ್ನಾಟಕ ರಾಜ್ಯ ಗೆಜೆಟ್‌ನಲ್ಲಿ ಪ್ರಕಟವಾದಂತೆ ಬೆಂಗಳೂರು ನಗರದಾದ್ಯಂತ ಕಾರುಗಳಿಗೆ ೬೦ ಕಿಮೀ ವೇಗ ಮಿತಿ , ಆಟೋರಿಕ್ಷಾಗಳಿಗೆ ೪೦ ಕಿ.ಮೀಗಳು ಮತ್ತು ಇತರೆ ಎಲ್ಲಾ ಮಾದರಿಯ ವಾಹನಗಳಿಗೆ ೫೦ ಕಿ.ಮೀಗಳೆಂದು ಪ್ರಕಟಿಸಲಾಗಿದೆ. ಬೆಂಗಳೂರಿನಾದ್ಯAತ ೧೪೦೦೦ ಕಿ.ಮೀಗಳ ರಸ್ತೆ ಜಾಲದಲ್ಲಿ ಎಲ್ಲಾ ಕಡೆಯು ಇವುಗಳನ್ನು ಹಾಕುವುದು ಅಷ್ಟೊಂದು ಪ್ರಾಯೋಗಿಕವಲ್ಲ.<br>ಕೆಲವು ಅಧಿಸೂಚಿತ ರಸ್ತೆಗಳಲ್ಲಿ ನಾಲ್ಕು ಲೇನ್‌ಗಳು ಮತ್ತು ರಸ್ತೆ ವಿಭಜಕಗಳಿದ್ದ ಕಡೆ ಉದಾಹರಣಗೆ ದೇವನಹಳ್ಳಿ ರಸ್ತೆ , ನೈಸ್ ರಸ್ತೆ, ಹಾಗೂ ಹೊರವರ್ತುಲ ರಸ್ತೆಯಲ್ಲಿ ವೇಗಮ ಮಿತಿ ಹೆಚ್ಚಾಗಿರುತ್ತದೆ. |
| | **ಪಾರ್ಕಿಂಗ್ ನಿಯಮ ಉಲ್ಲಂಘನೆ** |
| 27 | **ನನಗೆ ಪಾರ್ಕಿಂಗ್ ಉಲ್ಲಂಘನೆಗಾಗಿ ದಂಡ ಕಟ್ಟಿಸಿಕೊಳ್ಳಲಾಯಿತು. ಆದರೆ ನಾನು ನಿಲ್ಲಿಸಿದ್ದ ವಾಹನದಿಂದ ಕನಿಷ್ಟ ೨೦ ಮೀಟರ್** |

| | |
|---|---|
| | **ದೂರದಲ್ಲಿ ನೋ ಪಾರ್ಕಿಂಗ್ ಬೋರ್ಡ್ ಇತ್ತು. ಏಕೆ ಹೀಗೆ?** |
| | ನಗರದದ್ಯಾಂತ ಪ್ರತಿಯೊಂದು ಮೀಟರ್‌ಗೆ ಒಂದರAತೆ ನೋ-ಪಾರ್ಕಿಂಗ್ ಸೂಚನಾ ಫಲಕವನ್ನು ಅಳವಡಿಸುವುದು ಸಾಧುವಲ್ಲ. ಮತ್ತು ಪ್ರಾಯೋಗಿಕವಾಗಿ ಸಾಧ್ಯವಿಲ್ಲ. ನೋ-ಪಾರ್ಕಿಂಗ್ ಝೋನ್‌ಗಳನ್ನು ಗೆಜೆಟ್ ಮುಖಾಂತರ ಪೊಲೀಸ್ ಕಮೀಷನರ್‌ರವರು ಜಾಗವನ್ನು ಗುರ್ತಿಸಿ ನಿಲುಗಡೆ ಮಾಡಬಾರದೆಂಬುದಾಗಿ ಗೆಜೆಟ್‌ನಲ್ಲಿ ತಮ್ಮ ಆದೇಶ ಹೊರಡಿಸಿದ ನಂತರ ಪೊಲೀಸರು ಆ ಆದೇಶವನ್ನು ಜಾರಿಗೆ ತರಲು ಬ್ಯಾರಿಕೇಡ್‌ಗಳನ್ನು ಹಾಕಿಕೊಂಡು ಸೂಕ್ತವಾದ ಅಗತ್ಯ ಬೋರ್ಡ್ಗಳನ್ನು ಅಳವಡಿಸಲಾಗಿದೆ. ಆದ್ದರಿಂದ ಒಂದು ಅಂದಾಜಿನಂತೆ ಒಂದು ಬೋರ್ಡಿನಿಂದ ಎಡ ಮತ್ತು ಬಲಕ್ಕೆ ಕನಿಷ್ಠ ೫೦-೧೦೦ ಮೀಟರ್‌ಗಳ ಅಂತರವಿರುವ Aತೆ ನೋ-ಪಾರ್ಕಿಂಗ್ ಬೋರ್ಡ್ಗಳನ್ನು ಅಳವಡಿಸಲಾಗುತ್ತದೆ. ಆದ್ದರಿಂದ ನೋ-ಪಾರ್ಕಿಂಗ್ ಬೋರ್ಡ್ಗಳು ಒಂದರಿ Aದ ಮತ್ತೊಂದಕ್ಕೆ ೧೦೦ ಮೀಟರ್‌ಗಳ ಅಂತರದಲ್ಲಿ ಇರುತ್ತವೆ. |
| | **ಸಿಗ್ನಲ್ ದೀಪಗಳು** |
| 28 | **ಪೀಕ್ ಅರ್ಸ್ಗಗಳಲ್ಲಿ ಸಂಚಾರ ಪೊಲೀಸರು ಸಿಗ್ನಲ್ ದೀಪದ ಸ್ವಿಚ್ ಆಫ್ ಮಾಡುತ್ತಾರೆ ಏಕೆ** |
| | ಇದು ಉತ್ತಮ ಅಭ್ಯಾಸವಲ್ಲದಿದ್ದರೂ ಕೆಲವೊಮ್ಮೆ ಜಂಕ್ಷನ್‌ಗಳಲ್ಲಿ ಉಂಟಾಗುವ ಸಂಚಾರ ದಟ್ಟಣೆಯನ್ನು ನೀಗಿಸಲು ಅನಿವಾರ್ಯವಾಗಿದೆ. ಮುಂದಿನ ಗ್ರೀನ್ ಸಿಗ್ನಲ್‌ವರೆಗೂ ರಸ್ತೆಯಲ್ಲಿ ಸಂಪೂರ್ಣವಾಗಿ ಸಂಚಾರ ದಟ್ಟಣೆಯು ನಿವಾರಣೆಯಾಗದಿದ್ದಾಗ ಮತ್ತು ಸಂಚಾರ ಸ್ಥಗಿತವನ್ನು ನೀಗಿಸುವ ಹಲವಾರು ಸಂದರ್ಭಗಳಲ್ಲಿ ಸಿಗ್ನಲ್ ದೀಪಗಳನ್ನು ಸ್ವಿಚ್ ಆಫ್ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ದೀಪಗಳನ್ನು ಸ್ವಿಚ್ ಆಫ್ ಮಾಡದಿದ್ದರೆ ವಾಹನಗಳು ಜಂಕ್ಷನ್‌ನಲ್ಲಿಯೇ ನಿಂತು ವಾಹನಗಳು ಚಲಿಸಲು ಸಾಧ್ಯವಾಗದಂತೆ ಗ್ರಿಡ್-ಲಾಕ್ ಸೃಷ್ಟಿಯಾಗುತ್ತದೆ. ಈ ರೀತಿ ಮಾಡಿದಲ್ಲಿ ಎಲ್ಲರಿಗೂ ಅನುಕೂಲಕರ. ಈ ಸಮಯದಲ್ಲಿ ಸಂಚಾರ ಪೊಲೀಸರು ಜಂಕ್ಷನ್‌ಗಳಲ್ಲಿ ಉಂಟಾಗಿರುವ ಸಂಚಾರ ದಟ್ಟಣೆಯನ್ನು ಹಾಗೂ ಸ್ಥಗಿತಗೊಂಡಿರುವುದನ್ನು ನಿಯಮಿತವಾಗಿ ನಿಯಂತ್ರಿಸಿ ನಿರ್ವಹಣೆ ಮಾಡುತ್ತಾರೆ. ಈ ರೀತಿಯ ನಿರ್ವಹಣೆಯಿಂದ ರಸ್ತೆಗಳು ಮತ್ತು ಜಂಕ್ಷನ್‌ಗಳಲ್ಲಿ ಕೂಡಿದ್ದ ಸಂಚಾರ ದಟ್ಟಣೆಯು ತ್ವರಿತವಾಗಿ ಕಡಿಮೆಯಾಗಿ ನಿವಾರಣೆಯಾಗುತ್ತದೆ. ಮಳೆ ಬಂದಾಗ ಉಂಟಾಗುವ ವಾಟರ್ ಲಾಗಿಂಗ್ , ರಸ್ತೆ ಗುಂಡಿಗಳು, ಚಳುವಳಿ, ರಸ್ತೆ ರೋಕೋ ನಿಂದ ಉಂಟಾಗುವ ಸಂಚಾರ ದಟ್ಟಣೆಯನ್ನು ನಿಭಾಯಿಸಲು ಮತ್ತು ಗಣ್ಯ ವ್ಯಕ್ತಿಗಳ ಸಂಚರಣೆಯ ಸಮಯದಲ್ಲಿ ಸಿಗ್ನಲ್ ದೀಪಗಳನ್ನು ಸ್ವಿಚ್ ಆಫ್ ಮಾಡುವುದು ಅನಿವಾರ್ಯವಾಗುತ್ತದೆ. ಆದಾಗ್ಯೂ ಈ ಅಭ್ಯಾಸವನ್ನು ತಾತ್ಕಾಲಿಕವಾಗಿ ಮಾಡಲಾಗುತ್ತದೆಯೇ ಹೊರತು ಮುಂದುವರಿಸಲು ಅನುಮತಿಸಲಾಗುವುದಿಲ್ಲ. |
| | **ಸ್ಥಳದಂಡ ನೋಟೀಸ್** |
| 29 | **ಸಂಚಾರ ಪೊಲೀಸ ಅಧಿಕಾರಿಗಳ ಪೈಕಿ ಸ್ಥಳದಂಡ ನೋಟೀಸ್ ನೀಡಲು ಯಾರಿಗೆ ಅಧಿಕಾರ ಇರುತ್ತದೆ?** |
| | ಸಹಾಯಕ ಪೊಲೀಸ್ ಸಬ್‌ಇನ್ಸ್ಪೆಕ್ಟರ್ ಹುದ್ದೆ ಹಾಗೂ ಈ ಹುದ್ದೆಗಿಂತ ಮೇಲಿರುವ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಸ್ಥಳದಂಡ ಸಂಚಾರ ನಿಯಮ ಉಲ್ಲಂಘನೆ ಚಲನ್‌ಗಳು ಅಥವಾ ನೋಟೀಸ್‌ಗಳನ್ನು ನೀಡುವ ಅಧಿಕಾರಿವಿದೆ. ಸಹಾಯಕ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಅಥವಾ ಎ.ಎಸ್.ಐ (ಒಂದು ನಕ್ಷತ್ರ), ಪೊಲೀಸ್ ಸಬ್ ಇನ್ಸ್ಪೆಕ್ಟರ್ ಅಥವಾ ಪಿಎಸ್‌ಐ (ಎರಡು ಸ್ಟಾರ್), ಪೊಲೀಸ್ ಇನ್ಸ್ಪೆಕ್ಟರ್ |

| | |
|---|---|
| | ಅಥವಾ ಪಿಐ (ಮೂರು ಸ್ಟಾರ್) ದರ್ಜೆಯ ಅಧಿಕಾರಿಗಳಿಗೆ ಸ್ಥಳ ದಂಡವನ್ನು ಸಂಗ್ರಹಿಸಲು ಅಧಿಕಾರವಿದೆ. ಎಎಸ್‌ಐ ಶ್ರೇಣಿಗಿಂತ ಕೆಳಗಿರುವ ಹೆಚ್‌ಸಿ ಮತ್ತು ಪಿಸಿ ರವರುಗಳು ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನದ ಸವಾರರ/ಚಾಲಕನ ವಾಹನ ಸಂಖ್ಯೆಯನ್ನು ಡಿಜಿಟಲ್ ಎಫ್.ಟಿ.ವಿ.ಆರ್ ನಲ್ಲಿ ನಮೂದಿಸಬೇಕು. ಹೀಗೆ ಮಾಡಿದ ವಾಹನದ ಪಟ್ಟಿಯನ್ನು ಆಟೋಮೇಷನ್ ಸೆಂಟರ್‌ಗೆ ಸಲ್ಲಿಸಬೇಕು. ಆಟೋಮೇಷನ್ ಸೆಂಟರ್‌ನಿ Aದ ವಾಹನದ ಮಾಲೀಕರ ವಿಳಾಸಕ್ಕೆ ನೋಟೀಸನ್ನು ಕಳುಹಿಸಲಾಗುವುದು. ಉಲ್ಲಂಘನೆದಾರರು ಮೇಲೆ ಹೇಳಿದಂತೆ ದಂಡವನ್ನು ಪಾವತಿಸಬೇಕಾಗುತ್ತದೆ. ಯಾವುದೇ ಸಂಚಾರ ಪೊಲೀಸ್ ಕಾನ್ಸ್ಟೇಬಲ್ ಮತ್ತು ಹೆಡ್‌ಕಾನ್ಸ್ಟೇಬಲ್‌ಗಳು ಪಿಡಿಎ (ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್) ರಸೀದಿ ಪುಸ್ತಕಗಳನ್ನು ಕೊಂಡೊಯ್ಯದ ಕಾರಣ ಸ್ಥಳ ದಂಡವನ್ನು ಸಂಗ್ರಹಿಸುವ ಅಧಿಕಾರ ಹೊಂದಿರುವುದಿಲ್ಲ. ಎಎಸ್‌ಐ ಶ್ರೇಣಿಗಿಂತ ಕೆಳಗಿರುವ ಯಾವುದೇ ಅಧಿಕಾರಿ ದಂಡವನ್ನು ಸಂಗ್ರಹಿಸಿದರೆ ವಾಹನ ಚಾಲಕ/ಸವಾರ ದೂರನ್ನು ನೀಡಬಹುದು. |
| 30 | **ಸ್ಥಳ ದಂಡ ಪಾವತಿಸಲು ಬಯಸುವುದಿಲ್ಲ. ಇತರ ಆಯ್ಕೆ ಏನು?** |
| | ಸಂಚಾರ ನಿಯಮ ಉಲ್ಲಂಘಿಸಿದ ಉಲ್ಲಂಘನೆದಾರ ಸ್ಥಳ ದಂಡವನ್ನು ಪಾವತಿಸಲು ಬಯಸದಿದ್ದರೆ , ಅಥವಾ ಸ್ಥಳದಂಡದ ಮೊತ್ತ ಇಲ್ಲದಿದ್ದರೆ, ಆತನು ತನ್ನ ಮೂಲ ಚಾಲನಾ ಪರವಾನಗಿಯನ್ನು ಒಪ್ಪಿಸಬೇಕಾಗುತ್ತದೆ. ಇದಕ್ಕಾಗಿ ಸಂಬ A್ಧಪಟ್ಟ ಅಧಿಕಾರಿ ಸ್ವೀಕೃತಿ ನೀಡುತ್ತಾರೆ. ಉಲ್ಲಂಘನೆದಾರ ಒಂದು ವಾರದೊಳಗೆ ಪೊಲೀಸ್ ಠಾಣೆಗೆ ಹಾಜರಾಗಿ ಸ್ಥಳ ದಂಡ ಪಾವತಿಸಿ ಚಾಲನಾ ಪರವಾನಗಿಯನ್ನು ಮರಳಿ ಪಡೆಯಬಹುದು. ಅಥವಾ ಉಲ್ಲಂಘನೆದಾರ ನ್ಯಾಯಾಲಯದಲ್ಲಿ ದಂಡವನ್ನು ಪಾವತಿಸಿ ನ್ಯಾಯಾಲಯದ ಆದೇಶಗಳಿಗೆ ಬದ್ಧನಾಗಿರಬಹುದು. ಉಲ್ಲಂಘನೆದಾರ ನ್ಯಾಯಾಲಯಕ್ಕೆ ಹಾಜರಾಗಲು ವಿಫಲವಾದರೆ , ಆತನನ್ನು ನ್ಯಾಯಾಲಯದಲ್ಲಿ ಹಾರ್ಜಳಡಿಸಲು ನ್ಯಾಯಾಲಯವು ವಾರಂಟ್ ಹೊರಡಿಸುವ ಮೂಲಕ ಉಲ್ಲಂಘನೆದಾರ ಬಂಧನದ ಹಾಗೂ ಕಠಿಣ ದಂಡದ ಪರಿಣಾಮವನ್ನು ಎದುರಿಸಬೇಕಾಗುತ್ತದೆ. |
| | **ನೀವು ಅಪಘಾತವನ್ನು ಕಣ್ಣಾರೆ ಕಂಡ ಸಾಕ್ಷಿಯಾಗಿದ್ದರೆ** |
| 31 | **ನಾನು ಅಪಘಾತವನ್ನು ಕಣ್ಣಾರೆ ಕಂಡಿದ್ದರೆ ಏನು ಮಾಡಬೇಕು? ಈ ಬಗ್ಗೆ ನಾನು ತಿಳಿಸಿದರೆ ನನಗೆ ಪುನ: ಪುನ: ಪೊಲೀಸ್ ಠಾಣೆಗೆ ಮತ್ತು ನ್ಯಾಯಾಲಯಕ್ಕೆ ಪದೇ ಪದೇ ಕರೆದು ಸಾಕ್ಷಿ ನುಡಿಯಲು ಪೊಲೀಸರಿಂದ ಕಿರುಕುಳಕ್ಕೆ ಒಳಗಾಗುತ್ತೇನೆಯೇ?** |
| | ನೀವು ಅಪಘಾತವನ್ನು ಕಣ್ಣಾರೆ ಕಂಡರೆ ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿ. ವೈದ್ಯಕೀಯ ನೆರವಿಗೆ ವ್ಯವಸ್ಥೆ ಮಾಡಿ. ಪೊಲೀಸರಿಗೆ ಮಾಹಿತಿ ನೀಡುವ ಮೊದಲು ಆರೋಪಿ ಹಾಗೂ ಆರೋಪಿ ವಾಹನದ ವಿವರಗಳನ್ನು ಗಮನಿಸಿ. ಗಾಯಗೊಂಡ ವ್ಯಕ್ತಿಗೆ ತುರ್ತು ಸಹಾಯವನ್ನು ನೀಡುವಂತ ದಯಾಳು ವ್ಯಕ್ತಿಯಾಗಿ ನಿಮ್ಮನ್ನು ಬಿಂಬಿಸಲಾಗುತ್ತದೆ. ಅಪಘಾತದ ಬಗ್ಗೆ ಪೊಲೀಸ್ ಅಥವಾ ತುರ್ತು ಸೇವೆಗಳಿಗೆ ವಿಷಯ ತಿಳಿಸಿದಲ್ಲಿ ನಿಮಗೆ ಯಾವುದೇ ರೀತಿಯಲ್ಲಿ ನಿಮ್ಮ ಗುರುತನ್ನು ಬಹಿರಂಗಪಡಿಸಲು ಒತ್ತಾಯಿಸುವುದಿಲ್ಲ. ಅಪಘಾತದ ಬಗ್ಗೆ ಮಾಹಿತಿ ಮುಟ್ಟಿಸಿದ ದಯಾಳು ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸುವುದು ಆಸ್ಪತ್ರೆಗಳಿಗೆ ಬಿಟ್ಟ ವಿಚಾರವಾಗಿರುತ್ತದೆ. ಉತ್ತಮ ನಂಬಿಕೆಯಿ ಂದ ಮಾಡಿದ ಕೆಲಸಕ್ಕೆ ಮಾಹಿತಿ ನೀಡಿದ ವ್ಯಕ್ತಿಯನ್ನು ಅಪರಾಧಿ ಆಥವಾ ನಾಗರಿಕ ಹೊಣೆಗಾರಿಕೆಯಿಂದ ಮುಕ್ತಗೊಳಿಸಲಾಗುತ್ತದೆ. |
| 32 | **ಸಂಚಾರ ನಿಯಮ ಉಲ್ಲಂಘನೆಗಳಿಗೆ ಬಿ.ಎಂ.ಟಿ.ಸಿ ಬಸ್ ಚಾಲಕರನ್ನು ಸಂಚಾರ ಪೊಲೀಸರು ಏಕೆ ಶಿಕ್ಷೆಗೆ ಗುರಿಪಡಿಸುವುದಿಲ್ಲ?** |

| | |
|---|---|
| | ಬಿಎಂಟಿಸಿ ಬಸ್ಸುಗಳನ್ನು ಸಂಚಾರ ನಿಯಮ ಜಾರಿಯಿಂದ ವಿನಾಯಿತಿ ನೀಡಲಾಗಿದೆ ಮತ್ತು ದ್ವಿಚಕ್ರ ವಾಹನ ಸವಾರರಿಗೆ ಮಾತ್ರ ದಂಡ ವಿಧಿಸಲಾಗುತ್ತದೆ ಎಂದು ಹೇಳುವುದು ನಿಜವಲ್ಲ. ಮೊದಲನೆಯದಾಗಿ, ೬೦ ಲಕ್ಷ ದ್ವಿಚಕ್ರ ವಾಹನಗಳಿದ್ದರೆ ಬಿಎಂಟಿಸಿ ಬಸ್ಸುಗಳು ಕೇವಲ ೬೦೦೦ ಇರುವುದರಿಂದ ದ್ವಿಚಕ್ರ ವಾಹನಗಳ ವಿರುದ್ಧದ ನಿಯಮ ಜಾರಿ ಹೆಚ್ಚಾಗಿ ಗೋಚರಿಸುತ್ತದೆ. ಅಂಕಿ ಅಂಶಗಳ ಪ್ರಕಾರ ವಾಹನಗಳ ಒಟ್ಟು ಸಂಖ್ಯೆಯಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ ಶೇಕಡ ೭೩ ರಷ್ಟಿದ್ದು ಈ ವಾಹನಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ. ಕೇವಲ ೪೧% ಮಾತ್ರ. ಎರಡನೆಯದಾಗಿ , ಬಸ್ಸುಗಳಿಗೆ ದಂಡ ವಿಧಿಸುವ ವಿಧಾನವು ದ್ವಿಚಕ್ರ ವಾಹನಗಳಿಗಿಂತ ಭಿನ್ನವಾಗಿರುತ್ತದೆ. ಬಿಎಂಟಿಸಿ ಬಸ್ ಚಾಲಕ ಸಂಚಾರ ಉಲ್ಲಂಘನೆ ಮಾಡಿದ ಬಗ್ಗೆ ಬಸ್ಸನ್ನು ತಡೆದು ನಿಲ್ಲಿಸಿದರೆ ಬಸ್ಸಿನಲ್ಲಿರುವ ೬೦ ಪ್ರಯಾಣಿಕರು ತೊಂದರೆಗೊಳಗಾಗುತ್ತರೆ. ಅಲ್ಲದೆ ಬಿಎಂಟಿಸಿ ಬಸ್ಸನ್ನು ಐದು ನಿಮಿಷಗಳ ಕಾಲ ರಸ್ತೆಯಲ್ಲಿ ನಿಲ್ಲಿಸುವುದರಿಂದ ಸಂಚಾರ ದಟ್ಟಣೆ ಮತ್ತು ಸಂಚರ ಸ್ಥಗಿತಗೊಂಡು , ಸ್ಥಗಿತಗೊಂಡ ಸಂಚಾರವನ್ನು ತೆರವುಗೊಳಿಸಲು ಗಂಟೆಗಟ್ಟಲೆ ತೆಗೆದುಕೊಳ್ಳುತ್ತದೆ. ಆದ್ದರಿಂದ ಬಿಎಂಟಿಸಿ ಬಸ್ಸುಗಳನ್ನು ರಸ್ತೆಗಳಲ್ಲಿ ನಿಲ್ಲಿಸಲಾಗುವುದಿಲ್ಲ ಮತ್ತು ಬದಲಾಗಿ ಸಂಚಾರ ನಿಯಮ ಉಲ್ಲಂಘನೆಗಳನ್ನು ಗುರುತಿಸಿ ದಂಡವನ್ನು ಪಾವತಿಸಲು ಬಿಎಂಟಿಸಿ ಡಿಪೋ ವ್ಯವಸ್ಥಾಪಕರಿಗೆ ನೋಟೀಸ್ ಕಳುಹಿಸಲಾಗುತ್ತದೆ. |
| | **ಇಂತಿಷ್ಟೇ ದಂಡ ಸಂಗ್ರಹಿಸಲು ಏನಾದರೂ ಗುರಿ ಇದೆಯೇ?** |
| 33 | **ಸ್ಥಳ ದಂಡ ಸಂಗ್ರಹಿಸಲು ಸಂಚಾರ ಪೊಲೀಸರಿಗೆ ಯಾವುದಾದರೂ ಗುರಿಗಳು ಇವೆಯೇ?** |
| | ಸಂಚಾರ ಪೊಲೀಸರಿಗೆ ಸ್ಥಳ ದಂಡ ಸಂಗ್ರಹಿಸುವಲ್ಲಿ ಯಾವುದೇ ಗುರಿಗಳು ಇರುವುದಿಲ್ಲ. ಮುಖ್ಯ ಉದ್ದೇಶ ಯಾರೊಬ್ಬರು ಸಂಚಾರ ನಿಯಮ ಉಲ್ಲಂಘನೆಗಳನ್ನು ಎಸಗದಂತೆ ನಿಗಾ ವಹಿಸುವುದಾಗಿರುತ್ತದೆ. ಸಂಚಾರ ಪೊಲೀಸ್ ವಿಭಾಗವು ಆದಾಯ ಗಳಿಸುವ ಇಲಾಖೆಯಲ್ಲ ಅಥವಾ ಸಂಗ್ರಹಿಸಿದ ಸ್ಥಳದಂಡ ಮೊತ್ತಕ್ಕೂ ಇಲಾಖೆಯ ಬಜೆಟ್‌ಗೂ ಯಾವುದೇ ಸಂಬ Aಧವಿಲ್ಲ. ಸಂಗ್ರಹಿಸಿದ ದಂಡವು ಸರ್ಕಾರದ ಬೊಕ್ಕಸಕ್ಕೆ ಹೋಗುತ್ತದೆ. ಕಠಿಣ ನಿಯಮ ಜಾರಿಯಿಂದಾಗಿ ೨೦೧೯ ರಲ್ಲಿ ೮೯ ಕೋಟಿ ರೂಗಳ ದಂಡವನ್ನು ಸಂಗ್ರಹಿಸಿರುವುದು ಇಲಾಖೆಗೆ ಹೆಮ್ಮೆಯ ವಿಷಯವಲ್ಲ. ಆದರೆ ಈ ರೀತಿಯಾಗಿ ದಂಡ ಸಂಗ್ರಹಕ್ಕೆ ಹೆಚ್ಚು ಹೆಚ್ಚು ಸಂಚಾರ ನಿಯಮ ಉಲ್ಲಂಘನೆಗಳಾಗುತ್ತಿವೆ ಎಂಬುದು ನಮ್ಮೆಲ್ಲರಿಗೂ ಕಾಳಜಿಯ ವಿಷಯವಾಗಿದೆ. ಸಾರ್ವಜನಿಕರು ಸಂಚಾರ ನಿಯಮಗಳನ್ನು ಪಾಲಿಸಿ ದಂಡ ಮೊತ್ತ ಸಂಗ್ರಹಣೆಯಲ್ಲಿ ಕಡಿಮೆಯಾದಲ್ಲಿ ಇಲಾಖೆಯು ಹೆಚ್ಚಿನ ಸಂತೋಷ ಪಡುತ್ತದೆ. ಸಂಚಾರ ಪೊಲೀಸರು ಇಲ್ಲದಿದ್ದಾಗ ನಿಯಮ ಉಲ್ಲಂಘನೆಗಳು ಹೆಚ್ಚಿನ ರೀತಿಯಲ್ಲಿ ಘಟಿಸುತ್ತಿರುವುದು ದುರದೃಷ್ಟಕರ. |
| 34 | **ಪೊಲೀಸರು ಸಿಗ್ನಲ್ ಜಂಪ್ ಮಾಡುವವರನ್ನು ಏಕೆ ಹಿಡಿಯುತ್ತಾರೆ? ಅದರ ಬದಲು ಪೊಲೀಸರೇ ಸಿಗ್ನಲ್ ಲೈಟ್ ಬಳಿ ನಿಂತರೆ ಯಾರೊಬ್ಬರೂ ಸಿಗ್ನಲ್ ಜಂಪ್ ಮಾಡುವುದಿಲ್ಲ?** |
| | ಪ್ರಪಂಚದಾದ್ಯAತ ಇತರೆ ದೇಶಗಳಲ್ಲಿ ಸಿಗ್ನಲ್ ಲೈಟ್‌ಗಳನ್ನು ಹಾಕಿದರೆ ಸಾಮಾನ್ಯವಾಗಿ ಆ ಪಾಯಿಂಟ್‌ಗೆ ಪೊಲೀಸರನ್ನು ನೇಮಿಸುವುದಿಲ್ಲ. ಏಕೆಂದರೆ ಪ್ರತಿಯೊಬ್ಬ ರಸ್ತೆ ಬಳಕೆದಾರನು ದೀಪದ ಸೂಚನೆಯನ್ನು ಪಾಲಿಸುತ್ತಾನೆ. ಆದರೆ ನಮ್ಮಲ್ಲಿ ಹಾಗಲ್ಲ. ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಪೊಲೀಸರಿದ್ದು ಕೆಂಪು ಸಿಗ್ನಲ್ ಇದ್ದರೆ ಮಾತ್ರ ನಿಂತುಕೊಳ್ಳುವ ನಾಟಕವಾಡುತ್ತಾರೆ. ಪೊಲೀಸರಿಲ್ಲ ದಿದ್ದರೆ ಕೆಂಪು ದೀಪ ಇದ್ದರೂ ಸಹ ಅದನ್ನು ಉಲ್ಲಂಘಿಸುತ್ತಾರೆ. ನಮ್ಮ ಸಮಾಜದ ಈ ಕೆಲಸವನ್ನು ನಾವೆಲ್ಲರೂ ಖಂಡಿಸಬೇಕು. ಮುಂದಿನ ಕೆಲ ವರ್ಷಗಳಲ್ಲೂ ಸಹ ನಮ್ಮ ಈ ಕನಸು ಕನಸಾಗಿಯೇ ಉಳಿಯುತ್ತದೆ. ರಸ್ತೆ ಬಳಕೆದಾರರ ವರ್ತನೆಯು ಸರಿಹೋಗುವ ವರೆಗೆ ಈ ರೀತಿ ಮಾಡುವುದು ಅನಿವಾರ್ಯವಾಗಿದೆ. ರಸ್ತೆ ಬಳಕೆದಾರರ ವರ್ತನೆ ಬದಲಾಗದ ಹೊರತು ಈ ಬಗ್ಗೆ ನಾವು |

| | |
|---|---|
| | ಅಂದುಕೊಂಡಿದ್ದನ್ನು ಸಾಧಿಸಲಾಗುವುದಿಲ್ಲ. |
| 35 | **ರಸ್ತೆ ಖಾಲಿಯಾಗಿದ್ದಾಗ ಮತ್ತು ಉತ್ತಮವಾಗಿದ್ದಾಗ ಅತಿವೇಗವಾಗಿ ಹೋಗುವವರನ್ನು ಸಂಚಾರ ಪೊಲೀಸರು ಏಕೆ ಹಿಡಿಯುತ್ತಾರೆ? ಅವರು ವೇಗವನ್ನು ಏಕೆ ನಿಯಂತ್ರಿಸುತ್ತಾರೆ?** |
| | ರಸ್ತೆಗಳು ಕೇವಲ ವಾಹನ ಸವಾರರಿಗೆ ಮಾತ್ರ ಲಭ್ಯವಿರುವ ಪ್ರದೇಶಗಳಲ್ಲ. ಅವುಗಳನ್ನು ನಂಬಿಕೊ Aಡು ಪಾದಚಾರಿಗಳು, ವರ್ತಕರು ಇನ್ನೂ ಹಲವರಿದ್ದಾರೆ. ಖಾಲಿ ಇರುವ ರಸ್ತೆಗಳು ನಿಮಗೆ ವೇಗವಾಗಿ ಹೋಗಲು ಪ್ರೇರೇಪಿಸುವಂತೆ ತೋರಿದರೂ ಅದು ತರವಲ್ಲ. ಯಾರಾದರೂ ಪಾದಚಾರಿಗಳು ಏಕಾಏಕಿ ರಸ್ತೆಗೆ ಬರಬಹುದು. ರಸ್ತೆಗಳನ್ನು ಯಾವುದೋ ಒಂದು ವೇಗದ ಮಿತಿಗೆ ನಿರ್ದಿಷ್ಟಗೊಳಿಸಿ ಸುರಕ್ಷತೆಗಾಗಿ ನಿರ್ಮಿಸಲಾಗಿರುತ್ತದೆ. ಇಂತಹ ರಸ್ತೆಗಳ ಮೇಲೆ ಜವಾಬ್ದಾರಿಯುತವಾಗಿ ವಾಹನವನ್ನು ಚಲಾಯಿಸಬೇಕಾದದ್ದು ನಾಗರೀಕರನ ಕರ್ತವ್ಯ. ರಸ್ತೆಗಳಲ್ಲಿ ವಾಣಿಜ್ಯ ಹಾಗೂ ವಾಸಸ್ಥಳಗಳಲ್ಲಿ ಆಗಾಗ ರಸ್ತೆ ಬಳಕೆದಾರರು ಓಡಾಟ ಮಾಡುವುದರಿಂದ ಅತಿವೇಗದ ಚಾಲನೆ ಒಳ್ಳೆಯದಲ್ಲ. ಹೀಗಾಗಿ ಪೊಲೀಸರು ಅತಿವೇಗವಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ಅನಿವಾರ್ಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ. |
| | **ಟ್ರಾಫಿಕ್ ಸಿಗ್ನಲ್‌ಗಳ ಅವಶ್ಯಕತೆ** |
| 36 | **ನಮಗೆ ಸಂಚಾರ ಸಿಗ್ನಲ್‌ಗಳು ಏಕೆ ಬೇಕು?** |
| | ಸಂಚಾರವು ಸ್ಥಗಿತಗೊಳ್ಳುವುದು ಮತ್ತು ಅಡ್ಡಾದಿಡ್ಡಿಯಾಗಿ ಚಲಿಸುವುದನ್ನು ನಿಯಂತ್ರಿಸಲು ನಮಗೆ ಸಂಚಾರ ದೀಪಗಳು ಬೇಕಾಗಿವೆ. ರೋಟರಿಗಳು ಮತ್ತು ರಸ್ತೆಯ ಜಂಕ್ಷನ್‌ಗಳು ಜಾಗವನ್ನು ಹಂಚಿಕೊಳ್ಳುತ್ತವೆ. ಇದರಿಂದಾಗಿ ವಿವಿಧ ದಿಕ್ಕುಗಳಿಂದ ಬರುವ ಸಂಚಾರವು ಒಟ್ಟಾಗಿ ಮುಂದುವರೆಯುತ್ತದೆ ಅಥವಾ ವೃತ್ತಾಕಾರದಲ್ಲಿ ಚಲಿಸುತ್ತದೆ. ಮತ್ತು ವಾಹನಗಳು ತಾವು ಹೋಗಬೇಕಾದ ದಿಕ್ಕಿಗೆ ಹೋಗಲು ಸಹಕಾರಿಯಾಗುತ್ತದೆ. ಆದರೆ ೫೦೦೦ ಪಿಸಿಯುಗೂ ಹೆಚ್ಚು ವಾಹನಗಳ ದಟ್ಟಣೆ ಉಂಟಾದರೆ ರೋಟರಿಗಳು ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ರೋಟರಿಗಳು ಯಶಸ್ವಿಯಾಗಬೇಕೆಂದರೆ ರಸ್ತೆ ಬಳಕೆದಾರರಲ್ಲಿ ರೈಟ್ ಆಫ್ ವೇ ಬಗ್ಗೆ ಸಾಕಷ್ಟು ತಿಳುವಳಿಕೆ ಇರಬೇಕು. ಇಲ್ಲದಿದ್ದರೆ ಇದು ಯಶಸ್ವಿಯಾಗುವುದಿಲ್ಲ.<br>೫೦೦೦ ಪಿಸಿಯುಗೂ ಹೆಚ್ಚು ವಾಹನ ಚಟ್ಟಣೆ ಇದ್ದಲ್ಲಿ ಸಂಚಾರ ಸಿಗ್ನಲ್‌ಗಳ ಅವಶ್ಯಕತೆ ಮನವರಿಕೆಯಾಗುತ್ತದೆ. ಸಿಗ್ನಲ್‌ಗಳೆಂದರೆ ಸಮಯವನ್ನು ಹಂಚಿಕೊ Aಡು ವಾಹನಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಂದಾದ ನಂತರ ಮತ್ತೊಂದು ದಿಕ್ಕಿನಿಂದ ಕಳುಹಿಸಲು ಸಾಧ್ಯವಾಗಿಸುವ ಪರಿಕರಗಳಾಗಿವೆ. ಆದಾಗ್ಯೂ ೧೦೦೦೦ ಪಿಸಿಯುಗಳಿಗಿಂತ ಸಂಚಾರ ದಟ್ಟಣೆಯು ಹೆಚ್ಚಾದಲ್ಲಿ ಸಿಗ್ನಲ್‌ಗಳ ಕಾರ್ಯಕ್ಷಮತೆಯು ಕ್ಷೀಣಿಸಿ ತಮ್ಮ ಪರಿಣಾಮಕಾರಿ ಕಾರ್ಯವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುವುದಿಲ್ಲ. ಏಕೆಂದರೆ ಸಿಗ್ನಲ್ ಸೈಕಲ್‌ನ ಸಮಯವು ಬಹಳವಾಗಿ ಹೆಚ್ಚುತ್ತದೆ. ಆದಾಗ್ಯೂ ೧೨೦೦೦ ಪಿಸಿಯುಗಳವರೆವಿಗೂ ಕೆಲವು ತಿರುವುಗಳನ್ನು ಪ್ರತಿಬಂಧಿಸಿ ನಾವು ಹೇಗೋ ಸಂಚಾರವನ್ನು ನಿರ್ವಹಿಸಬಹುದು. ಆದರೆ ೧೨೦೦೦ ಪಿಸಿಯುಗೂ ಹೆಚ್ಚಾದಾಗ ಗ್ರೇಡ್ ಸೆಪರೇಟರ್ ಬೇಕೇಬೇಕಾಗುತ್ತದೆ. ಗ್ರೇಡ್ ಸೆಪರೇಟರ್‌ಗಳು ಊರ್ಧ್ವ ಮುಖವಾಗಿ ಸಮಯವನ್ನು ಮತ್ತು ಜಾಗವನ್ನು ಹಂಚಿಕೊಳ್ಳುವುದರಿ Aದ ಜಂಕ್ಷನ್‌ಗಳಲ್ಲಿ ಸರಾಗ ವಾಹನ ಸಂಚಾರವನ್ನು ಏರ್ಪಡಿಸಲು ಸಹಕರಿಸುತ್ತವೆ. ಪ್ರತಿಯೊಂದು ಸ್ಥಳದಲ್ಲೂ ಸಹ ಗ್ರೇಡ್ ಸೆಪರೇಟರ್‌ಗಳನ್ನು ಮಾಡುವುದು ಸಾಧ್ಯವಿಲ್ಲ. ಮೂಲಭೂತವಾಗಿ ಸಿಗ್ನಲ್‌ಗಳು ರಸ್ತೆಯ ಮೇಲೆ ಶಿಸ್ತನ್ನು ಒಡಮೂಡಿಸುತ್ತವೆ. ಪಾದಚಾರಿಗಳಿಗೆ ಪ್ರತ್ಯೇಕ ಸಮಯ ಮೀಸಲಿರುವುದರಿಂದ ಅವರೂ ಸಹ ಸುರಕ್ಷಿತವಾಗಿ ರಸ್ತೆ ದಾಟಲು ಸಹಕಾರಿಯಾಗುತ್ತವೆ. |

| | |
|---|---|
| 37 | **ನಗರದಲ್ಲಿ ಸಿಗ್ನಲ್‌ರಹಿತವಾದ ಸಂಚಾರವು ಸಾಧ್ಯವಿಲ್ಲವೆ?** |
| | ಸರಿಸುಮಾರು ೪೪ ,೦೦೦ ಕೂಡುರಸ್ತೆ ಇರುವ ನಗರದಲ್ಲಿ ಕಂಡುಬರುವ ಅತಿಹೆಚ್ಚಿನ ಸಂಚಾರ ದಟ್ಟಣೆ ಹಗಲು ರಾತ್ರಿ ಎನ್ನದೆ ಸಂಚರಿಸುವ ವಾಹನಗಳು ಸತತವಾಗಿ ಎಲ್ಲೂ ನಿಲ್ಲದೆ ಸಾಗಬೇಕೆಂದರೆ ಗ್ರೇಡ್ ಸೆಪರೇಟರ್‌ಗಳ ಅಗತ್ಯವಿದೆ. ಹಣ ಮತ್ತು ಜಾಗದ ಅಭಾವದಿಂದ ಎಲ್ಲಾ ಕಡೆಯೂ ಸಹ ಗ್ರೇಡ್ ಸೆಪರೇಟರ್‌ಗಳನ್ನು ಅಳವಡಿಸುವುದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕು. ಹೀಗಾಗಿ ಸಂಚಾರ ಸಿಗ್ನಲ್‌ಗಳು ಅತ್ಯಗತ್ಯ. ವಾಹನಗಳ ದಟ್ಟಣೆಯಲ್ಲಿ ಪಾದಚಾರಿಗಳು ಸಿಗ್ನಲ್‌ಗಳಿದ್ದಲ್ಲಿ ಮಾತ್ರ ವ್ಯವಸ್ಥಿತವಾಗಿ ಮತ್ತು ಸುರಕ್ಷಿತವಾಗಿ ರಸ್ತೆಯನ್ನು ದಾಟಬಲ್ಲರು. ಪ್ರಪಂಚದ ಎಲ್ಲ ಅತಿಮುಖ್ಯ ನಗರಗಳಲ್ಲಿ ಸಂಚಾರ ಸಿಗ್ನಲ್‌ಗಳಿವೆ. ಸಂಚಾರ ಸಿಗ್ನಲ್ ವ್ಯವಸ್ಥೆಯನ್ನು ಇನ್ನೂ ಉತ್ತಮಗೊಳಿಸುವ ಎಲ್ಲ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. |
| 38 | **ಒಂದೇ ಸೈಕಲ್‌ನಲ್ಲಿ ಎಲ್ಲಾ ಸಂಚಾರವನ್ನು ತಿಳಿಗೊಳಿಸಲು ಸಾಧ್ಯವಿಲ್ಲವೇ?** |
| | ಪ್ರಪಂಚದಾದ್ಯAತ ಒಂದು ಸಿಗ್ನಲ್ ಸೈಕಲ್ ಮುಗಿಯಲು (೪ ದಿಕ್ಕುಗಳಿಂದ) ೧೮೦ ಸೆಕೆಂಡ್‌ಗಳಿಗಿ Aತಲೂ ಹೆಚ್ಚು ಸಮಯವನ್ನು ನಿಗದಿಗೊಳಿಸಲಾಗುವುದಿಲ್ಲ. ಆದರೆ ಹೆಚ್ಚಿನ ಸಂಚಾರ ದಟ್ಟಣೆ ಇದ್ದಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರು ೨೦೦ ಸೆಕೆಂಡಿಗೂ ಹೆಚ್ಚು ಅವಧಿ ಇರುವ ಸಿಗ್ನಲ್ ಸೈಕಲ್‌ಗಳನ್ನು ಅಳವಡಿಸಿದ್ದಾರೆ. ತಾಂತ್ರಿಕವಾಗಿ ಸರಿಯಾದ ಯೋಜನೆಯಿಲ್ಲದೆ ಬೆಳೆಯುತ್ತಿರುವ ಖಾಸಗಿ ವಾಹನಗಳ ಮಾಲೀಕತ್ವವು ಮತ್ತು ಅತಿ ಹೆಚ್ಚಿನ ವಾಹನಗಳು ರಸ್ತೆಯ ಧಾರಣಾ ಶಕ್ತಿಯನ್ನು ಮೀರಿ ಹೆಚ್ಚುತ್ತಿರುವುದರಿಂದ ಇಂಟರ್‌ಸೆಕ್ಷನ್ ಗಳಲ್ಲಿ ಹೆಚ್ಚಿನ ಸಮಯದ ಸಿಗ್ನಲ್ ಸೈಕಲ್‌ಗಳು ಅನಿವಾರ್ಯವಾಗಿವೆ. ನಗರದ ೨೫ ಜಂಕ್ಷನ್‌ಗಳಲ್ಲಿ ಸಿಗ್ನಲ್ ಸೈಕಲ್‌ನ ಅವಧಿಯನ್ನು ೨೫೦ ಸೆಕೆಂಡ್‌ಗಳನ್ನಾಗಿ ನಿಗದಿಪಡಿಸಲಾಗಿದೆ. ಆದರೆ , ನಮ್ಮ ಉದ್ದೇಶವು ೨೦೦ ಸೆಕೆಂಡ್‌ಗಳಿಗಿ Aತ ಹೆಚ್ಚಿನ ಕಾಲಾವಧಿಯನ್ನು ನಿಗದಿಪಡಿಸದೆ ನಿರ್ವಹಿಸುವುದಾಗಿದೆ. ಈ ಸಮಯವು ಹೆಚ್ಚಿದಲ್ಲಿ ಇತರೆ ದಿಕ್ಕುಗಳಲ್ಲಿ ಕಾಯುತ್ತಿರುವವರೆಗೆ ಕಿರಿಕಿರಿಯಾಗುವುದಲ್ಲದೆ ಸಂಚಾರ ನಿಯಮ ಉಲ್ಲಂಘನೆಗಳು ಹೆಚ್ಚಲಿವೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ವಾಹನಗಳ ಸಂಚಾರವು ಸುಲಲಿತವಾಗಿ ಆಗದಿಲ್ಲವಾದಲ್ಲಿ ಅದು ಸಂಚಾರ ಸಿಗ್ನಲ್‌ನ ಸಮಸ್ಯೆಯಲ್ಲ. ಬದಲಾಗಿ ಮೂಲಭೂತ ಸೌಕರ್ಯದ ಸಮಸ್ಯೆಯಾಗಿರುತ್ತದೆ. |
| | **ಏಕಮುಖ ಸಂಚಾರ** |
| 39 | **ಪೊಲೀಸರು ಏಕಮುಖ ಸಂಚಾರ ಮಾಡುವ ಉದ್ದೇಶವೇನು?** |
| | ಅತಿ ಕಡಿಮೆ ಅಗಲವಿರುವ ಕ್ಯಾರಿಯೇಜ್ ವೇಯನ್ನು ನಿಭಾಯಿಸಲು ಮತ್ತು ಸತತ ಅತಿಹೆಚ್ಚು ವಾಹನಗಳ ಸಂಚರಣೆಯನ್ನು ತಪ್ಪಿಸಲು ರಸ್ತೆಯನ್ನು ಏಕಮುಖ ವಾಹನ ಸಂಚಾರವನ್ನಾಗಿ ಮಾರ್ಪಡಿಸಲಾಗುತ್ತದೆ. ದ್ವಿಮುಖ ಸಂಚಾರವಿದ್ದ ಕಡೆ ಪ್ರತಿಬಾರಿಯೂ ವಾಹನಗಳು ಬಲತಿರುವು ಪಡೆಯುವಾಗ ಜಂಕ್ಷನ್‌ನಲ್ಲಿ ಸಿಗ್ನಲ್ ಇರಬೇಕಾದದ್ದು ಅನಿವಾರ್ಯವಾಗುತ್ತದೆ. ಏಕೆಂದರೆ ಬಲ ತಿರುವು ಪಡೆಯುವ ಟ್ರಾಫಿಕ್ ಚಲಿಸುವಾಗ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳು ನಿಲ್ಲಬೇಕಾಗುತ್ತವೆ. ಆದರೆ , ಒಂದು ರಸ್ತೆಯನ್ನು ಏಕಮುಖ ವಾಹನ ಸಂಚಾರವನ್ನಾಗಿ ಮಾಡಿದರೆ ರಸ್ತೆಯ ಸಂಪೂರ್ಣ ಅಗಲವು ಲಭ್ಯವಾಗಿ ಸಂಚಾರವು ಸತತವಾಗಿ ಎಡಕ್ಕೆ ಅಥವಾ ಬಲಕ್ಕೆ ಯಾವುದೇ ಸಿಗ್ನಲ್ ಲೈಟ್ ಇಲ್ಲದೆ ತಿರುಗಿ ಹೋಗಬಹುದಾಗಿರುತ್ತದೆ. ಇದರಿಂದ ಸಂಚಾರ ದಟ್ಟಣೆಯು ಕಡಿಮೆಯಾಗಿ ಬಾಟಲ್ ನೆಕ್‌ಗಳು ನಿವಾರಣೆಯಾಗುತ್ತವೆ. |

| | |
|---|---|
| 40 | **ಸಂಚಾರ ಪೊಲೀಸರು ಏಕೆ ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಮಾತನಾಡುವುದಿಲ್ಲ? ನನಗೆ ಕನ್ನಡ ಬರುವುದಿಲ್ಲ.** |
| | ಸಂಚಾರ ಪೊಲೀಸರಿಗೆ ಮೂಲಭೂತ ಪದಗಳನ್ನು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತನಾಡುವಷ್ಟು ತರಬೇತಿಯನ್ನು ನೀಡಲಾಗಿದೆ. ಆದರೆ ಅವರ ಮಾತೃಭಾಷೆ ಕನ್ನಡವೆಂಬುದನ್ನು ನಾವು ಮರೆಯಬಾರದು. ಮತ್ತು ಕರ್ನಾಟಕ ರಾಜ್ಯದ ರಾಜ್ಯ ಭಾಷೆ ಕನ್ನಡವಾಗಿದ್ದು ಪ್ರತಿಯೊಬ್ಬರನ್ನು ಇಂಗ್ಲೀಷ್ ಅಥವಾ ಇತರೆ ಭಾಷೆಯಲ್ಲಿ ವ್ಯವಹರಿಸುವಂತೆ ನೀವು ಬಯಸುವುದು ಸರಿಯಲ್ಲ. ಅದು ನಿಮ್ಮ ಹಕ್ಕೂ ಅಲ್ಲಾ. ಆದಾಗ್ಯೂ ಸಂಚಾರ ಪೊಲೀಸರಿಗೆ ಸಾಪ್ಟ್ಸ್ಕಿ ಲ್ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ಬಹಳ ದಿನಗಳ ಕಾಲ ಕರ್ನಾಟಕದಲ್ಲಿ ಇರಬಯಸುವ ಅನ್ಯ ರಾಜ್ಯದ ನಾಗರೀಕರು ಸ್ವಲ್ಪ ಸ್ವಲ್ಪವಾಗಿ ಕನ್ನಡ ಕಲಿಯುವುದರಲ್ಲಿ ತಪ್ಪೇನಿಲ್ಲ. ಜೀವನವು ಅವರಿಗೆ ಸರಳವಾಗುತ್ತದೆ. |
| | **ಸಂಚಾರ ಪೊಲೀಸರು ವಾಹನದ ಇಗ್ನೀಷನ್ ಬೀಗವನ್ನು ಏಕೆ ಕಿತ್ತುಕೊಳ್ಳುತ್ತಾರೆ?** |
| 41 | **ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದಕ್ಕೆ ನನ್ನ ವಾಹನವನ್ನು ತಡೆದು ನಿಲ್ಲಿಸಿ ಸಂಚಾರ ಪೊಲೀಸರು ನನ್ನ ವಾಹನದ ಇಗ್ನೀಷನ್ ಬೀಗವನ್ನು ಬಲವಂತವಾಗಿ ಏಕೆ ತೆಗೆದುಕೊಳ್ಳುತ್ತಾರೆ?** |
| | ಈ ರೀತಿ ಮಾಡುವುದು ಉತ್ತಮವಾದ ಪದ್ಧತಿಯಲ್ಲ. ಆದಾಗ್ಯೂ , ಬಹಳಷ್ಟು ಜನ ಸಂಚಾರ ನಿಯಮ ಉಲ್ಲಂಘನೆ ಮಾಡುವವರು ಪೊಲೀಸರಿಗೆ ಚೆಳ್ಳೆ ಹಣ್ಣು ತಿನ್ನಿಸಿ ನಿಲ್ಲಿಸದೆ ಓಡಿಹೋಗಿ ಅವಮಾನ ಮತ್ತು ಅಪಹಾಸ್ಯಗಳಿಗೆ ಸಂಚಾರ ಪೊಲೀಸರನ್ನು ಈಡು ಮಾಡಿರುತ್ತಾರೆ ಎಂಬ ಅಂಶವನ್ನು ನಾವು ಮರೆಯಬಾರದು. ನೀವು ಅವರಂತಿಲ್ಲದಿರಬಹುದು. ಆದರೆ ನಿಮ್ಮಂತೆ ಇರುವವರು ಬಹಳ ಕಡಿಮೆ. ನೆನಪಿರಲಿ. |
| | **ನಿಮಗೆ ಹೆಚ್ಚಿನ ದಂಡ ವಿಧಿಸಲಾಗಿದಯೇ?** |
| 42 | **ಹೆಚ್ಚಿನ ದಂಡ ವಿಧಿಸಿರುವುದಿಲ್ಲವೆಂದು ನಾನು ಹೇಗೆ ತಿಳಿದುಕೊಳ್ಳಬೇಕು?** |
| | ವಿವಿಧ ಸಂಚಾರ ನಿಯಮ ಉಲ್ಲಂಘನೆಗಳಿಗೆ ೫೦೦/- ರೂಗಳಿಂದ (ಅತಿ ವೇಗದ ಚಾಲನೆ) ಪ್ರಾರಂಭವಾಗಿ ೧೦೦೦೦/- ರೂಗಳವರೆಗೆ (ಮೊಬೈಲ್ ಬಳಕೆ) ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ್ದಕ್ಕೆ ೧೦ ,೦೦೦/- ರೂಗಳವರೆಗೆ (ನ್ಯಾಯಾಲಯದಿಂದ ಮಾತ್ರ) ದಂಡ ಮೊತ್ತವನ್ನು ವಿಧಿಸಲಾಗುತ್ತದೆ. ಆದಾಗ್ಯೂ , ದಂಡ ವಿಧಿಸುವ ಅಧಿಕಾರಿಯು ತನ್ನ ಪಿಡಿಎ ಯಿಂದ ನಿಮಗೆ ವಿಧಿಸಲಾದ ಸಂಚಾರ ನಿಯಮ ಉಲ್ಲಂಘನೆಯ ಮೊತ್ತವನ್ನು ಮತ್ತು ಅದರ ರಶೀದಿಯನ್ನು ನೀಡುವುದರಿಂದ ನಿಮಗೆ ಹೆಚ್ಚಿನ ದಂಡ ವಿಧಿಸಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬಹುದು. |
| | **ಜಂಕ್ಷನ್‌ಗಳ ಬಳಿಯೇ ಬಸ್ ಶೆಲ್ಟರ್‌ಗಳಿರುವುದೇಕೆ?** |
| 43 | **ಜಂಕ್ಷನ್ ಬಳಿ ಇರುವ ಬಸ್ ಶೆಲ್ಟರ್‌ಗಳನ್ನು ಪೊಲೀಸರು ಏಕೆ ಸ್ಥಳಾಂತರಿಸವುದಿಲ್ಲ?** |
| | ಬಸ್ ಶೆಲ್ಟರ್‌ಗಳನ್ನು ಸ್ಥಳಾಂತರಿಸುವುದಾಗಲೀ ಅಥವಾ ಸ್ಥಾಪಿಸುವುದಾಗಲೀ ಸಂಚಾರ ಪೊಲೀಸರ ವ್ಯಾಪ್ತಿಗೆ ಬರುವುದಿಲ್ಲ. ದುರದೃಷ್ಟವಶಾತ್ ಪ್ರತಿ ಬಸ್ ಶೆಲ್ಟರ್ ಅದರ ಮೇಲೆ ಪ್ರಚುರಪಡಿಸುವ ಜಾಹೀರಾತುಗಳ ಕಂಪನಿಯವರಿಗೆ ಹಣವನ್ನು ತಂದುಕೊಡುವAತಿವೆ. ಆದಾಗ್ಯೂ , ಸಂಚಾರ ಪೊಲೀಸರು ಬಸ್ ಶೆಲ್ಟರ್‌ಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಸತತವಾಗಿ |

| | |
|---|---|
| | ಮಾಡುತ್ತಲೇ ಇದ್ದರೂ ಸಹ ಈ ವಿಷಯದಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿಲ್ಲ. ಪ್ರತಿಯೊಬ್ಬರೂ ಸಹ ತಮ್ಮ ಮನೆಯ ಮುಂದೆ ಅಥವಾ ತಾವು ವ್ಯಾಪಾರ ಮಾಡುವ ಮಳಿಗೆ ಮುಂದೆ ಬಸ್ ನಿಲ್ದಾಣವಿರುವುದನ್ನು ಬಯಸುವುದಿಲ್ಲ. ಆದ್ದರಿಂದ ಇವುಗಳನ್ನು ಎಲ್ಲಿ ಸ್ಥಾಪಿಸಬೇಕು ಎಂಬ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ದೇಶನಗಳು ಇಲ್ಲದಿದ್ದು ಈ ಬಗ್ಗೆ ಖಚಿತವಾಗಿ ಯಾವುದೇ ಪರಿಹಾರವು ಕಂಡುಬರುತ್ತಿಲ್ಲ. ಬೆಂಗಳೂರಿನಲ್ಲಿ ಜಂಕ್ಷನ್‌ಗಳ ಬಳಿ ಹೊರತುಪಡಿಸಿ ಬೇರೆ ಕಡೆ ಬಸ್ ನಿಲ್ದಾಣವನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂಬ Aತ ಪರಿಸ್ಥಿತಿಯು ನಿರ್ಮಾಣವಾಗಿದೆ. ಆದರೆ , ಮುಂದಿನ ದಿನಗಳಲ್ಲಿ ಬರುವ ಹೊಸ ಬಸ್ ಶೆಲ್ಟರ್‌ಗಳನ್ನು ಈ ರೀತಿಯಾದ ಪಾಯಿಂಟ್ ಗಳಲ್ಲಿ ಸ್ಥಾಪಿಸದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಬಸ್‌ಗಳಂತೂ ಶೆಲ್ಟರ್ ಇಲ್ಲದಿದ್ದ ಜಾಗದಲ್ಲೂ ಸಹ ನಿಲ್ಲುತ್ತಿವೆ. ಇತಿಹಾಸದ ತಪ್ಪುಗಳನ್ನು ತಕ್ಷಣಕ್ಕೆ ತಿದ್ದುವುದು ಕಷ್ಟಸಾಧ್ಯವೆನಿಸುತ್ತದೆ. ಸಾರ್ವಜನಿಕರೂ ಸಹ ಫ್ಲೆ öÊಓವರ್ ಗಳ ಪ್ರಾರಂಭದಲ್ಲಿ ಬಸ್‌ಗಳಿಗಾಗಿ ಕಾಯುತ್ತಾ ಸಂಚಾರ ದಟ್ಟಣೆಯನ್ನು ಉಂಟು ಮಾಡುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇಂತಹ ಸಂದರ್ಭಗಳನ್ನು ಪರಿಹರಿಸುವ ಕಾರ್ಯದಲ್ಲಿ ರಸ್ತೆ ಬಳಕೆದಾರರಾದ ನೀವುಗಳು ಗಣನೀಯ ಪಾತ್ರವನ್ನು ವಹಿಸಬೇಕಿದೆ. |
| | **ಹಿಟ್ ಅಂಡ್ ರನ್** |
| 44 | **ಇನ್ನೊಬ್ಬ ವಾಹನ ಚಾಲಕನು ನನ್ನ ವಾಹನಕ್ಕೆ ಡಿಕ್ಕಿ ಮಾಡಿ ವಾಹನವನ್ನು ನಿಲ್ಲಿಸದೇ ಪರಾರಿಯಾಗಿರುತ್ತಾನೆ. ನಾನು ವಿಮೆಯನ್ನು ಹೇಗೆ ಪಡೆಯಬೇಕು?** |
| | ನಿಮ್ಮ ವಾಹನದ ರಿಪೇರಿಗಾಗಿ ವಿಮೆಯನ್ನು ಪಡೆಯಲು ನೀವು ಅಪಘಾತ ನಡೆದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಗೆ ಹೋಗಿ ನಡೆದ ಅಪಘಾತದ ವಿವರಗಳು ಹಾಗೂ ನಿಮ್ಮ ವಾಹನ ಜಖಂಗೊ Aಡ ಬಗ್ಗೆ ದಾಖಲಿಸಿ ಅಲ್ಲಿಯ ಠಾಣಾ ದಿನಚರಿಯಲ್ಲಿ ನಮೂದು ಮಾಡಿಸಿ ನಿಮ್ಮ ದೂರಿನ ಪ್ರತಿಗೆ ಠಾಣೆಯ ಮೊಹರು ಹಾಗೂ ಉಸ್ತುವಾರಿ ಅಧಿಕಾರಿಯ ಸಹಿ ಪಡೆದು ವಿಮೆಯನ್ನು ಪಡೆದುಕೊಳ್ಳಬಹುದಾಗಿದೆ. ಆದರೆ ನಿಮಗೆ ಅಪಘಾತ ಮಾಡಿದ ವ್ಯಕ್ತಿಯ ಕಡೆಯಿಂದ ವಿಮೆಯನ್ನು ಪಡೆಯಲು ಒಂದು ಪ್ರಥಮ ವರ್ತಮಾನ ವರದಿಯನ್ನು ಠಾಣೆಯಲ್ಲಿ ದಾಖಲಿಸಬೇಕು ತದನಂತರ ತನಿಖೆಯನ್ನು ಮಾಡಿ ಸಂಬ Aಧಪಟ್ಟ ಠಾಣೆಯವರು ಘನ ನ್ಯಾಯಾಲಯಕ್ಕೆ ತನಿಖೆಯಲ್ಲಿ ಯಾರ ದೋಷ ಎಂಬುದನ್ನು ಕಂಡುಹಿಡಿದು ಸಕಾರಣಗಳೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುತ್ತಾರೆ. ತದನಂತರ ನೀವು ನ್ಯಾಯಾಲಯಕ್ಕೆ ನಿಮ್ಮ ಕ್ಲೆ öÊಮು ಅರ್ಜಿಯನ್ನು ದಾಖಲಿಸಿ ಪರಿಹಾರವನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಆದರೆ ಹೀಗೆ ಮಾಡಿಕೊಳ್ಳಲು ನಿಮಗೆ ವಾಹನದ ನೋಂದಣಿ ಸಂಖ್ಯೆ ತಿಳಿದಿರಬೇಕು. |
| | **ಮುಕ್ತ ಎಡ ತಿರುವು** |
| 45 | **ರಸ್ತೆಯ ಎಲ್ಲಾ ಜಂಕ್ಷನ್‌ಗಳಲ್ಲಿ ಮುಕ್ತ ಎಡತಿರುವನ್ನು ಏಕೆ ನೀಡಿರುವುದಿಲ್ಲ?** |
| | ಮುಕ್ತ ಎಡತಿರುವನ್ನು ನೀಡುವುದು ಮುಖ್ಯವಾಗಿ ರಸ್ತೆಯ ಅಗಲ ಮತ್ತು ಒಟ್ಟು ಸೇರುವ ಹಾಗೂ ಬೇರೆ ಬೇರೆ ದಿಕ್ಕಿಗೆ ಚಲಿಸುವ ವಾಹನಗಳ ಸಂಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಅಪೇಕ್ಷಿಸುತ್ತದೆ. ಕೆಲವೊಮ್ಮೆ ಎಡತಿರುವು ಪಡೆಯುತ್ತಿರುವ ವಾಹನಗಳಿಗೆ ಬಲದಿಂದ ಎಡಕ್ಕೆ ಚಲಿಸುವ ವಾಹನಗಳ ಅಡ್ಡಬಂದು ಸಂಘರ್ಷಣೆಯ ಬಿಂದುವಾಗಿ ಮಾರ್ಪಡುತ್ತವೆ. ಇದರಿಂದ ಅಪಘಾತಗಳುಂಟಾಗುತ್ತವೆ.<br><br>ಐರೋಪ್ಯ ಮತ್ತು ಪಾಶ್ಚಿಮಾತ್ರಯ ರಾಷ್ಟ çಗಳಲ್ಲಿ ಜನರು ಪಾದಚಾರಿಗಳನ್ನು ಮತ್ತು ಅವರ ಹಕ್ಕುಗಳನ್ನು ಬಹಳಷ್ಟು |

| | |
|---|---|
| | ಗೌರವಾಧರಾರಗಳಿಂದ ನೋಡುತ್ತಾರೆ. ಆದರೆ ಭಾರತದಲ್ಲಿ ಪರಿಸ್ಥಿತಿ ಅಷ್ಟೊಂದು ಸುಧಾರಿಸಿಲ್ಲ. ಮುಕ್ತ ಬಲ ತಿರುವು ಕೊಟ್ಟಿದ್ದೇ ಆದಲ್ಲಿ ಸಂಚಾರವು ನಿರಂತರವಾಗಿ ನುಗ್ಗುತ್ತಾ ಪಾದಚಾರಿಗಳ ನಡೆದಾಟವೇ ಕಷ್ಟಕರವಾಗುತ್ತದೆ. |
| 46 | **ರಸ್ತೆಯಲ್ಲಿ ಫ್ರೀ ಲೆಫ್ಟ್ ಅಥವಾ ರೈಟ್ ತಿರುವು ಇರುವುದು ಹೇಗೆ ಗೊತ್ತಾಗುತ್ತದೆ.?** |
| | ಸಂಚಾರಕ್ಕೆ ಸಂಬ Aಧಪಟ್ಟ ಸೂಚನಾ ಫಲಕವನ್ನು ಗಮನಿಸಬೇಕು. ಮುಕ್ತ ಬಲ ತಿರುವು ಇಲ್ಲ ಎಂಬಲ್ಲಿ ನೀವು ಬಲ ತಿರುವು ಪಡೆಯಬಾರದು. ಸಿಗ್ನಲ್ ಬಂದಾಗ ಮಾತ್ರ ನೀವು ಬಲತಿರುವನ್ನು ಪಡೆಯಬಹುದಾಗಿರುತ್ತದೆ. ಸಂಚಾರ ದೀಪಗಳಲ್ಲೂ ಸಹ ಬಾಣದ ಗುರುತಿನಿಂದ ಯಾವ ಯಾವ ಕಡೆ ಚಲಿಸಬಹುದೆಂದು ತಿಳಿಸಲಾಗಿರುತ್ತದೆ. |
| | **ಟಿಂಟೆಡ್ ಗ್ಲಾಸ್** |
| 47 | **ಮೋಟಾರ್ ವಾಹನದ ಮುಂಭಾಗದ ವೀಕ್ಷಣಾ ಗಾಜು, ಹಿಂಭಾಗದ ಮತ್ತು ಪಾರ್ಶ್ವಗಳ ಕಿಟಕಿ ಗಾಜುಗಳಲ್ಲಿ ಬೆಳಕಿನ ವೀಕ್ಷಣಾ ಮಾನದಂಡವು ಎಷ್ಟಿರಬೇಕು ಹಾಗೂ ಇದಕ್ಕಿರುವ ನಿಯಮ ಯಾವುದು?** |
| | ಶ್ರೀ ಅವಿಷೇಕ್ ಗೋಯಂಕಾ ರವರು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ. ೨೬೫/೨೦೧೧ ರಲ್ಲಿ ವಿಚಾರಣೆ ನಡೆಸಿದ ಘನ ನ್ಯಾಯಾಲಯವು ದೇಶಾದ್ಯಾಂತ ವಾಹನದ ಮುಂಭಾಗದ ವೀಕ್ಷಣಾ ಗಾಜು ಮತ್ತು ಹಿಂಭಾಗದ ಕಿಟಕಿ ಗಾಜುಗಳ ಮೇಲೆ ಹಾಗೂ ಪಾರ್ಶ್ವಗಳ ಕಿಟಕಿ ಗಾಜುಗಳ ಮೇಲೆ ಬೆಳಕು ನಿರ್ಬಂಧಕ ಫಿಲ್ಮ್ ಳನ್ನು ಉಪಯೋಗಿಸುವುದನ್ನು ನಿಷೇಧಿಸಿ ತೀರ್ಪು ನೀಡಿರುತ್ತದೆ. ಅಲ್ಲದೆ ಈ ನಿಷೇಧವನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವಂತೆ ಪೊಲೀಸರಿಗೆ ನಿರ್ದೇಶನ ನೀಡಿರುತ್ತದೆ.<br>ಕೇಂದ್ರೀಯ ಮೋಟಾರ್ ವಾಹನ ನಿಯಮಗಳು ೧೯೮೯ರ ನಿಯಮ ೧೦೦ (೨) ರ ಅನ್ವಯ ಯಾವುದೇ ಮೋಟಾರ್ ವಾಹನದ ಮುಂಭಾಗದ ವೀಕ್ಷಣಾ ಗಾಜು ಮತ್ತು ಹಿಂಭಾಗದ ಕಿಟಕಿ ಗಾಜುಗಳಿಂದ ಶೇಖಡಾ ೭೦ ರಷ್ಟು ಬೆಳಕು ಒಳ ಹಾಯ್ದು ಬರಬೇಕಾಗಿದ್ದು, ಪಾರ್ಶ್ವಗಳ ಕಿಟಕಿ ಗಾಜುಗಳಿಂದ ಶೇಖಡಾ ೫೦ ರಷ್ಟು ಬೆಳಕು ಒಳ ಹಾಯ್ದು ಬರಬೇಕಾಗಿದ್ದು, ಬೆಳಕಿನ ವೀಕ್ಷಣಾ ಮಾನದಂಡವು ಇಂಡಿಯನ್ ಸ್ಟಾಂಡರ್ಡ್ಸ ೨೫೫೩: ಭಾಗ ೨ - ೧೯೯೨ ಗೆ ಅನುಗುಣವಾಗಿರತಕ್ಕದ್ದು. ಈ ನಿಯಮದ ಉಲ್ಲಂಘನೆಯು ಭಾರತೀಯ ಮೋಟಾರ್ ವಾಹನ ಕಾಯ್ದೆ ೧೯೮೮ ರ ಕಲಂ ೧೭೭ ರ ಅನ್ವಯ ಶಿಕ್ಷಾರ್ಹವಾಗಿರುತ್ತದೆ.<br>ಆದರೆ ಮೋಟಾರು ವಾಹನ ಕಂಪನಿಗಳಿAದಲೇ ವೀಕ್ಷಣೆಗಾಗಿ ಮತ್ತು ಪಾರ್ಶ್ವಗಳಿಗೆ ಬೆಳಕು ಪ್ರತಿಬಂಧಕ ಗುಣವುಳ್ಳ ಗಾಜನ್ನು ಕೇಂದ್ರೀಯ ಮೋಟಾರು ವಾಹನ ಕಾಯ್ದೆ ೧೯೮೯ರ ನಿಯಮ ೧೦೦(೨) ರ ಅನ್ವಯ ಅಳವಡಿಸಬಹುದು. ಆದರೆ ಯಾವುದೇ ಕಾರಣಕ್ಕೂ ಬೆಳಕು ಪ್ರತಿಬಂಧಕ “ಪಿಲಂ” ಗಳನ್ನು ಅಳವಡಿಸುವಂತಿಲ್ಲ. |